• ಮಂಡ್ಯ • ಮೈಸೂರು • ಚಾಮರಾಜನಗರ • ಹಾಸನ • ರಾಮನಗರ • ತುಮಕೂರು • ಬೆಂಗಳೂರು ಗ್ರಾಮಾಂತರ • ಬೆಂಗಳೂರು ನಗರ

ಕಾಯಕ ಯೋಗಿನಿ

ಸಂಪಾದಕರು: ಅರುಣಜ್ಯೋತಿ ಬಿ.ಕೆ. KAYAKA YOGI-Regional Daily ಪ್ರಾದೇಶಿಕ ದಿನಪತ್ರಿಕೆ

RNI NO.KARKAN/2018/77805 | POST NO.KA/SK/MND/999/2022-2024 | ಮಂಡ್ಯ Mandya | ಸಂಪುಟ Volume 07 | ಸಂಚಿಕೆ Issue 24 | ಮಂಗಳವಾರ Tuesday | 30–04–2024 | ಪುಟಗಳು Pages 06 | ಬೆಲೆ Rate 02 | ಸಂಪರ್ಕ: 9980605484



ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹಿರಿಯ ಮುತ್ಸದ್ದಿ ಸಂಸದ ಶ್ರೀನಿವಾಸ್ ಪ್ರಸಾದ್ ಅವರ ಮೈಸೂರಿನ ನಿವಾಸಕ್ಕೆ ತೆರಳಿ ಅಂತಿಮ ದರ್ಶನ ಪಡೆದು ಕುಟುಂಬದವರಿಗೆ ಸಾಂತ್ವನ ಹೇಳಿದರು.

ಹಿರಿಯ ಮುತ್ಸದ್ದಿ ಶ್ರೀನಿವಾಸ ಪ್ರಸಾದ್ ಇನ್ನಿಲ್ಲ





ದಲಿತ ದಮನಿತರ ಪರವಾದ ದಿಟ್ಟ ದನಿ ಮಾಜಿ ಸಚಿವ ಮತ್ತು ಹಿರಿಯ ಮುತ್ಸದ್ದಿ ನಾಯಕ ಶ್ರೀನಿವಾಸಪ್ರಸಾದ್ ಅವರ ಸಾವು ನನ್ನನ್ನು ಆಘಾತಕ್ಕೀಡು ಮಾಡಿದೆ. ಅನ್ಯಾಯ–ಅಸಮಾನತೆಯ ವಿರುದ್ಧದ ಹೋರಾಟವನ್ನೇ ಬದುಕಾಗಿಸಿಕೊಂಡಿದ್ದ ಅವರ ಅಗಲಿಕೆ ರಾಜ್ಯದ ಸಾಮಾಜಿಕ ನ್ಯಾಯದ ಪರವಾದ ರಾಜಕೀಯ ಹೋರಾಟಕ್ಕೆ ದೊಡ್ಡ ಹಿನ್ನಡೆಯಾಗಿದೆ. ದೀರ್ಘಕಾಲ ಕಾಂಗ್ರೆಸ್ ಪಕ್ಷದ ಪ್ರಮುಖ ನೇತಾರರಾಗಿ ಕೆಲಸ ಮಾಡಿದ್ದ ಶ್ರೀನಿವಾಸ ಪ್ರಸಾದ್ ಸಚಿವರಾಗಿ ಮತ್ತು ಲೋಕಸಭಾ ಸದಸ್ಯರಾಗಿ ದೀರ್ಘ ಕಾಲ ಜನ ಸೇವೆ ಮಾಡಿದ್ದಾರೆ. ಅವರೊಬ್ಬ ಪ್ರಗತಿಪರ ಚಿಂತನೆಯ ರಾಜಕೀಯ ನಾಯಕ. ಹಳೆಮೈಸೂರು ಭಾಗದಲ್ಲಿ ಬಹಳಷ್ಟು ಕಾಲ ನಾವು ಬೇರೆಬೇರೆ ಪಕ್ಷಗಳಲ್ಲಿ ಕೆಲಸ ಮಾಡಿದ್ದರೂ ಪರಸ್ಪರ ಗೌರವಪೂರ್ಣ ಸಂಬಂಧವನ್ನು ಉಳಿಸಿಕೊಂಡಿದ್ದೆವು. ಇತ್ತೀಚೆಗಷ್ಟೇ ನಾನು ಭೇಟಿಯಾಗಿದ್ದ ಸಂದರ್ಭದಲ್ಲಿ ನಾವು ಹಳೆಯ ನೆನಪುಗಳನ್ನು ಮೆಲುಕು ಹಾಕಿಕೊಂಡೆವು. ಆಗ ಗೆಲುವಾಗಿದ್ದ ಪ್ರಸಾದ್ ಇಷ್ಟು ಶೀಘ್ರ ನಮ್ಮನ್ನು ಅಗಲಿ ಹೋಗುತ್ತಾರೆ ಎಂಬ ನಿರೀಕ್ಷೆಯೇ ಇರಲಿಲ್ಲ. ಮೃತರ ಆತ್ಮಕ್ಕೆ ಚಿರಶಾಂತಿ ಸಿಗಲಿ ಎಂದು ಪ್ರಾರ್ಥಿಸುತ್ತೇನೆ. ಅವರ ಕುಟುಂಬದ ಸದಸ್ಯರು ಮತ್ತು ಅಪಾರವಾದ ಅಭಿಮಾನಿ ಬಳಗದ ದು:ಖದಲ್ಲಿ ನಾನೂ ಭಾಗಿಯಾಗಿದ್ದೇನೆ.

ಸಿದ್ದರಾಮಯ್ಯ, ಮುಖ್ಯಮಂತ್ರಿ

'ಮಗ ಮಾತ್ರವಲ್ಲ, ಅಪ್ಪನೂ ವಿಕೃತಕಾಮಿ, ಹೆಣ್ಣುಬಾಕ ಎನ್ನುವ ಸುದ್ದಿ ಇದೆ'

ಹಾಸನದ 'ಪೆನ್‌ಡ್ರೈವ್' ಪ್ರಕರಣ ಎಲ್ಲೆಲ್ಲೂ ಸಂಚಲನ ಸೃಷ್ಟಿ ಮಾಡಿದ್ದು, ಭಾರಿ ದೊಡ್ಡ ಬಿರುಗಾಳಿಯನ್ನೇ ಎಬ್ಬಿಸಿದೆ. ಕರ್ನಾಟಕದ ರಾಜಕೀಯ ಮಾತ್ರವಲ್ಲ, ಭಾರತದ ರಾಜಕೀಯ ಅಂಗಳದಲ್ಲೂ ಈ ವಿಚಾರ ದೊಡ್ಡ ಚರ್ಚೆಗೆ ವೇದಿಕೆ ಒದಗಿಸಿದೆ. ಇಷ್ಟು ಮಾತ್ರವಲ್ಲ ಈಗ ಪ್ರಜ್ವಲ್ ರೇವಣ್ಣ ಅವರ ತಂದೆ, ಮಾಜಿ ಸಚಿವ ರೇವಣ್ಣ ಅವರ ವಿರುದ್ಧವೂ ಆರೋಪವನ್ನ ಮಾಡಿದ್ದಾರೆ ಇಲ್ಲೊಬ್ಬರು.

ಹೌದು ಹಾಸನದಲ್ಲಿ ರೋಡ್ ರೋಡ್‌ನಲ್ಲಿ ಸಿಗುತ್ತಿರುವ. ಪಾರ್ಕ್ & ಕ್ರೀಡಾಂಗಣದಲ್ಲೆಲ್ಲಾ ಚೆಲ್ಲಾಪಿಲ್ಲಿ ಆಗಿ ಬಿದ್ದಿದ್ದ ಪೆನ್‌ಡ್ರೈವ್ ಒಳಗೆ ಪ್ರಜ್ವಲ್ ರೇವಣ್ಣ ಅವರಿಗೆ ಸಂಬಂಧಿಸಿರುವ ಖಾಸಗಿ ವಿಡಿಯೋಗಳು ಇವೆ ಎಂಬ ಗಂಭೀರ ಆರೋಪ ಕೇಳಿಬಂದಿದೆ. ಈ ಆರೋಪಗಳು, ದೊಡ್ಡದಾಗಿ ಕಾಡ್ಗಿಚ್ಚು ಹೊತ್ತಿಸಿವೆ. ಇದೇ ಸಮಯದಲ್ಲಿ ಸಿದ್ದರಾಮಯ್ಯ ಅವರ ಸರ್ಕಾರ ಕೂಡ ಈ ಘಟನೆಯನ್ನು ಗಂಭೀರವಾಗಿ ಪರಿಗಣಿಸಿ, ವಿಶೇಷ ತಂಡ ರಚನೆ ಮಾಡಿ ತನಿಖೆಗೆ ಕೂಡ ಆದೇಶ ನೀಡಿದೆ. ಇದೇ ಸಮಯದಲ್ಲಿ ಕೆಆರ್‌ಎಸ್ ಪಕ್ಷದ ರವಿ ಕೃಷ್ಣಾ ರೆಡ್ಡಿ ಅವರು ಈಗ ಮಾಜಿ ಸಚಿವ ಎಚ್.ಡಿ. ರೇವಣ್ಣ ವಿರುದ್ಧ, ಪರೋಕ್ಷವಾಗಿ ಗಂಭೀರ ಆರೋಪವನ್ನ ಮಾಡಿದ್ದಾರೆ. ಎಚ್.ಡಿ. ರೇವಣ್ಣ ಹೆಸರು ಬಳಸದೆ ಗಂಭೀರ ಆರೋಪ ಮಾಡಿದ್ದಾರೆ.

'ಅಸಹಾಯಕ ಅಬಲೆಯರು ಮಾತ್ರವಲ್ಲ': ರವಿ ಕೃಷ್ಣಾ ರೆಡ್ಡಿ ಅವರು ಸೋಷಿಯಲ್ ಮೀಡಿಯಾದಲ್ಲಿ ಹಾಕಿರುವ ಪೋಸ್ಟ್ ಪ್ರಕಾರವೇ, 'ಮಗ ಮಾತ್ರವಲ್ಲ, ಅಪ್ಪನೂ ಕಾಮುಕ, ವಿಕೃತಕಾಮಿ, ಹೆಣ್ಣುಬಾಕ ಎನ್ನುವ ಸುದ್ದಿ ಇದೆ (ನಂಬಬಹುದಾದ ಮೂಲಗಳಿಂದ). ಕೇವಲ ಅಸಹಾಯಕ ಅಬಲೆಯರು ಮಾತ್ರವಲ್ಲ, ಮಹಿಳಾ ಅಧಿಕಾರಿಗಳೂ ಸೇರಿದಂತೆ ಸಬಲೆಯರೂ ಈ ಅಪ್ಪ–ಮಗನಿಂದ ಲೈಂಗಿಕ ಶೋಷಣೆಗೆ ಒಳಪಟ್ಟಿದ್ದಾರಂತೆ. ಕೆಲವು ಮಹಿಳಾ ಪೊಲೀಸ್ ಅಧಿಕಾರಿಗಳು ಹಿರಿಯ ಅಧಿಕಾರಿಗಳ ಗಮನಕ್ಕೂ ವಿಚಾರ ಒಯ್ದಿದ್ದರಂತೆ. ಆದರೆ... ಗುಲಾಮಿ ಮನಸ್ಥಿತಿಯ ಭ್ರಷ್ಟ ಅಧಿಕಾರಿಗಳು ಯಾವ ರಕ್ಷಣೆ ತಾನೇ ನೀಡಬಲ್ಲರು?' ಎಂದು ಪ್ರಶ್ನೆ ಮಾಡಿದ್ದಾರೆ. 'ಧೈರ್ಯವಾಗಿ ಮುಂದೆ ಬಂದರೆ'

ಹಾಗೇ ತಮ್ಮ ಆರೋಪವನ್ನು ಮುಂದುವರಿಸಿರುವ ರವಿ ಕೃಷ್ಣಾ ರೆಡ್ಡಿ, 'ಈಗ ಸಂತ್ರಸ್ಥರು ಧೈರ್ಯವಾಗಿ ಮುಂದೆ ಬಂದರೆ ಮಾತ್ರ ಅತ್ಯಾಚಾರಿಗಳಿಗೆ ಶಿಕ್ಷೆ ಆಗುತ್ತದೆ. ಕನಿಷ್ಠ ಸರ್ಕಾರಿ ನೌಕರಿಯ ಸೇವಾ ಭದ್ರತೆ ಮತ್ತು ಆರ್ಥಿಕಭದ್ರತೆ ಇರುವವರಾದರೂ ಮುಂದೆ ಬರಬೇಕು ಈಗಲ್ಲದಿದ್ದರೆ ಇನ್ಯಾವಾಗ? ನೀವಲ್ಲದಿದ್ದರೆ ಇನ್ಯಾರು? ರಾಜ್ಯದ ಬಹಳಷ್ಟು MLA/MPಗಳು ಮತ್ತು ಅವರ ಕುಟುಂಬಸ್ಥರು ಇದೇ ರೀತಿಯ ಕುಕೃತ್ಯಗಳಲ್ಲಿ ತೊಡಗಿರುವುದು ಸುಳ್ಳಲ್ಲ. ಆ ನೀಚರು ಎಷ್ಟೇ ಬಲಿಷ್ಠರಾಗಿರಲಿ, ಸಂತ್ರಸ್ಥ ಮಹಿಳೆಯರು ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷವನ್ನು ಸಂಪರ್ಕಿಸಿದರೆ ಅವರಿಗೆ ಎಲ್ಲಾ ತರಹದ ರಕ್ಷಣೆ ನೀಡುವ ಮತ್ತು ನ್ಯಾಯ ದೊರಕಿಸಿಕೊಡುವ ಕೆಲಸವನ್ನು KRS ಪಕ್ಷ ಮಾಡುತ್ತದೆ. ನೀವು ಯಾರಿಗೂ ಅಂಜಬೇಕಿಲ್ಲ. ಮೊದಲಿಗೆ, ಶೋಷಣೆಗೆ ಒಳಪಡುವುದನ್ನು ನಿರಾಕರಿಸಿ. ಧೈರ್ಯದಿಂದ ಎದ್ದು ನಿಲ್ಲಿ. ನಿಮಗೆ ಖಂಡಿತ ಬೆಂಬಲ ಮತ್ತು ರಕ್ಷಣೆ ಸಿಗುತ್ತದೆ. ಸಂಕೋಲೆಗಳಿಂದ ವಿಮೋಚನೆಯೂ.' ಎಂದಿದ್ದಾರೆ.

'ಜನರೂ ಗಂಭೀರವಾಗಿ ಯೋಚಿಸಬೇಕು': ಹಾಗೇ ತಮ್ಮ ಪೋಸ್ಟ್‌ನಲ್ಲಿ ಆರೋಪ ಮುಂದುವರಿಸಿರುವ ರವಿ ಕೃಷ್ಣಾ ರೆಡ್ಡಿ, 'ಲೋಕಸಭಾ ಚುನಾವಣೆಗಳು ನಡೆಯುತ್ತಿರುವ ಈ ಸಂದರ್ಭದಲ್ಲಿ ತಾವು ಎಂತಹ ವರಿಗೆ ಮತ ಹಾಕಿ ಬೆಂಬಲಿಸುತ್ತಿದ್ದೇವೆ ಎಂದು ಜನರೂ ಗಂಭೀರವಾಗಿ ಯೋಚಿಸಬೇಕು ಎಂದು ಮನವಿ ಮಾಡುತ್ತೇನೆ. ಅಂದಹಾಗೆ, ಜನತಾ ಜನಾರ್ದನನು ಕೊಟ್ಟ ಪವಿತ್ರವಾದ ಅಧಿಕಾರ ಬಲವನ್ನು ಅಧರ್ಮಕ್ಕೆ ಬಳಸುವವರು ಬದುಕಿರುವಾಗಲೇ ರೌರವ ನರಕ ಅನುಭವಿಸುತ್ತಾರೆ. ಅವರಷ್ಟೇ ಅಲ್ಲ, ಅವರನ್ನು ಪೋಷಿಸಿದ ಮತ್ತು ರಕ್ಷಿಸಿದ ಅಧರ್ಮಿ ರಕ್ಷಕರೂ. ಇವೆಲ್ಲವೂ ಕ್ಷಮಾರ್ಹವಲ್ಲದ ಘೋರ ಪಾತಕಗಳು. ನಿಮ್ಮ ಯಾವುದೇ ಪೂಜೆ, ಪುನಸ್ಕಾರ, ಯಾಗ, ಮಾಟ, ಮಂತ್ರಗಳು ನಿಮ್ಮನ್ನು ಶಿಕ್ಷೆಯಿಂದ ರಕ್ಷಿಸಲಾರವು. ಸ್ವಯಂಕೃತಾಪರಾಧ. ಅನುಭವಿಸಿ. ಏನೇ ಆಗಲಿ, ಒಳ್ಳೆಯದನ್ನೇ ಮಾಡಿ; ಮಾಡುತ್ತಲೇ ಇರಿ.' ಎಂದು ಆರೋಪ ಮಾಡಿದ್ದಾರೆ.





ಪ್ರಜ್ವಲ್ ಎಲ್ಲೋ ಹೋಗಿರಬಹುದು, ವಿಚಾರಣೆಗೆ ಕರೆದಾಗ ಬರುತ್ತಾನೆ: ರೇವಣ್ಣ ಫಸ್ಟ್ ರಿಯಾಕ್ಷನ್

ಬೆಂಗಳೂರು: ಹಾಸನ ಸಂಸದ ಹಾಗೂ ಜೆಡಿಎಸ್ ಅಭ್ಯರ್ಥಿ ಪ್ರಜ್ವಲ್ ರೇವಣ್ಣ ವಿರುದ್ಧ ಲೈಂಗಿಕ ದೌರ್ಜನ್ಯ ಆರೋಪ ಕೇಳಿ ಬಂದಿರುವ ಹಿನ್ನೆಲೆಯಲ್ಲಿ ಪುತ್ರನ ವಿರುದ್ಧದ ಈ ರೀತಿಯ ಆರೋಪ ಕುರಿತು ಮಾಜಿ ಸಚಿವ, ಶಾಸಕ ಹೆಚ್.ಡಿ ರೇವಣ್ಣ ಮೊದಲ ಪ್ರತಿಕ್ರಿಯೆ ನೀಡಿದ್ದಾರೆ. ಈ ಕುರಿತು ಮಾತನಾಡಿರುವ ಹೆಚ್.ಡಿ ರೇವಣ್ಣ, 'ನಾನೆಲ್ಲೂ ಓಡಿ ಹೋಗಿಲ್ಲ. ತನಿಖೆ ನಡೆಸಿ ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳಲಿ. ನಾವು ಕಾನೂನು ರೀತಿ ಈ ಪ್ರಕರಣವನ್ನು ಎದುರಿಸುತ್ತೇವೆ ಎಂದರು. ವಿಚಾರಣೆಗೆ ಕರೆದಾಗ ಪ್ರಜ್ವಲ್ ಬರುತ್ತಾನೆ: ಎಸ್ ಐಟಿ ತನಿಖೆ ಮಾಡುತ್ತಿರುವುದಿರಂದ ಏನು ಹೇಳಲ್ಲ. ತಮ್ಮ ಮಗ ಪ್ರಜ್ವಲ್ ರೇವಣ್ಣ ನಾಪತ್ತೆಯಾಗಿರುವ ವಿಚಾರಕ್ಕೆ ಪ್ರತಿಕ್ರಿಯಿಸಿದ ಎಚ್.ಡಿ. ರೇವಣ್ಣ, ಆತ ಎಲ್ಲೋ ಹೋಗಿರಬಹುದು. ಆದರೆ ವಿಚಾರಣೆಗೆ ಕರೆದರೆ ಬರುತ್ತಾನೆ ಎಂದು ಮಾಜಿ ಸಚಿವರೂ ಆದ ರೇವಣ್ಣ ತಿಳಿಸಿದ್ದಾರೆ.

ನರಸಿಂಹಸ್ವಾಮಿ ಬ್ರಹ್ಮರಥೋತ್ಸವ



ಮದ್ದೂರು: ಸುಡು ಬಿಸಿಲಿನ ಝಳದ ನಡುವೆ ಭಕ್ತರ ಜಯಘೋಷ, ಭಕ್ತಿ ಸಮರ್ಪಣೆಯ ಜತೆ ಜತೆಗೆ ಇಷ್ಟ ದೇವರ ರಥೋತ್ಸವ ರಥ ಬೀದಿಯಲ್ಲಿ ತೆರಳಿದ ವೇಳೆ ಸಂಘ, ಸಂಸ್ಥೆಗಳು ಮಜ್ಜಿಗೆ, ಪಾನಕ ವಿತರಿಸಿ ಧನ್ಯತೆ ಮೆರೆದರು. ಜಿಲ್ಲೆಯ ಇತಿಹಾಸ ಪ್ರಸಿದ್ಧ ಮದ್ದೂರು ಪಟ್ಟಣದ ಶ್ರೀ ನರಸಿಂಹಸ್ವಾಮಿ ರವರ ಬ್ರಹ್ಮರಥೋತ್ಸವವು ಸೋಮವಾರ ಸಾವಿರಾರು ಮಂದಿ ಭಕ್ತರ ಜಯಘೋಷಗಳ ನಡುವೆ ವಿಜೃಂಭಣೆಯಿಂದ ಜರುಗಿತು. ರಾಜ್ಯದ ವಿವಿಧೆಡೆಗಳಿಂದ ಆಗಮಿಸಿದ್ದ ಸಾವಿರಾರು ಭಕ್ತಾದಿಗಳ ಸಮ್ಮುಖದಲ್ಲಿ ರಥೋತ್ಸವದ ಹಿನ್ನೆಲೆಯಲ್ಲಿ ಶ್ರೀ ನರಸಿಂಹಸ್ವಾಮಿ ಹಾಗೂ ಪಕ್ಕದಲ್ಲೇ ಇರುವ ಶ್ರೀ ವರದರಾಜ, ಪಟ್ಟಾಭಿರಾಮ ದೇವಾಲಯಗಳಲ್ಲಿ ವಿವಿಧ ಪೂಜಾ ಕೈಂಕರ್ಯಗಳು ನೆರವೇರಿದವು. ರಥೋತ್ಸವದ ವೇಳೆ ಭಕ್ತಾದಿಗಳು ಉತ್ಸವ ಮೂರ್ತಿಗೆ ಹಣ್ಣು ಜವನಗಳನ್ನು ಎಸೆಯುವ ಮೂಲಕ ಜಯಘೋಷಣೆಯೊಡನೆ ವಿಶೇಷ ಪೂಜಾ ಕಾರ್ಯಕ್ರಮದಲ್ಲಿ ಪಾಲ್ಗೊಂಡರು. ಮಹಿಳೆಯರು ಮತ್ತು ಮಕ್ಕಳೂ ಸೇರಿದಂತೆ ನೆರೆದಿದ್ದ ಭಕ್ತ ಸಮೂಹ ರಥವನ್ನು ಎಳೆಯುವ ಮೂಲಕ ಹರಕೆಗಳನ್ನು ಸಲ್ಲಿಸಿದರು. ರಥೋತ್ಸವವು ದೇವಾಲಯ ಆವರಣದಿಂದ ಕೋಟೆಬೀದಿಯ ಮೂಲಕ ತೆರಳಿ ನಂತರ ದೇವಾಲಯದ ಮುಂಭಾಗಕ್ಕೆ ಆಗಮಿಸಿತು.

ಕೇಂದ್ರ ಸರ್ಕಾರ ಸಂವಿಧಾನ ವಿರೋಧಿ: ಸಿಎಂ ಸಿದ್ದರಾಮಯ್ಯ ಆಕ್ರೋಶ



ಕೊಪ್ಪಳ (ಕುಷ್ಟಗಿ): ಕೇಂದ್ರದಲ್ಲಿ ನರೇಂದ್ರ ಮೋದಿಯವರು 10 ವರ್ಷಗಳ ಕಾಲ ಸಂವಿಧಾನಕ್ಕೆ ವಿರೋಧವಾಗಿ ನಡೆದುಕೊಂಡಿದ್ದಷ್ಟೇ ಅಲ್ಲ ಸಂವಿಧಾನದ ಧ್ಯೇಯೋದ್ದೇಶಗಳನ್ನು ಈಡೇರಿಸುವ ಪ್ರಾಮಾಣಿಕ ಪ್ರಯತ್ನ ಮಾಡಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಅವರು ಇಂದು ಕುಷ್ಟಗಿಯಲ್ಲಿ ಆಯೋಜಿಸಲಾಗಿದ್ದ ಪ್ರಜಾಧ್ವನಿ –02 ಲೋಕಸಭಾ ಚುನಾವಣಾ ಪ್ರಚಾರ ಕಾರ್ಯಕ್ರಮದಲ್ಲಿ ಭಾಗವಹಿಸಿ ತಮ್ಮ ಪಕ್ಷದ ಅಭ್ಯರ್ಥಿಯಾದ ರಾಜಶೇಖರ್ ಹಿಟ್ನಾಳ್ ರವರ ಪರವಾಗಿ ಮತದಾರರಲ್ಲಿ ಮತ ಯಾಚನೆ ಮಾಡಿ ನಂತರ ಮತದಾರರನ್ನು ಉದ್ದೇಶಿಸಿ ಮಾತನಾಡಿದರು.

ರೈತರು, ಹಿಂದುಳಿದವರು, ಬಡವರು, ಅಲ್ಪಸಂಖ್ಯಾತರಿಗೆ ದೊಡ್ಡ ಅನ್ಯಾಯ ಮಾಡಿ ಅವರ ಬದುಕು ದುಸ್ತರಗೊಳಿಸಿದ್ದಾರೆ. ಬೆಲೆಯೇರಿಕೆ, ಹಣದುಬ್ಬರ, ಸಾಮಾನ್ಯ ಜನರ ಬದುಕು ಸಂಕಷ್ಟಕ್ಕೀಡಾಯಿತು ಎಂದರು.

ನರೇಂದ್ರ ಮೋದಿಯವರ ನೇತೃತ್ವದ ಬಿಜೆಪಿ ಸರ್ಕಾರ ದೇಶದಲ್ಲಿ ಆಡಳಿತ ಮಾಡಿದ್ದು, ಕಳೆದ ವಿಧಾನ ಸಭಾ ಚುನಾವಣೆಯಲ್ಲಿ ಜನತೆ ಕಾಂಗ್ರೆಸ್ ಗೆ ಆಶೀರ್ವಾದ ಮಾಡಿದ್ದಾರೆ. ಬಿಜೆಪಿ ಕರ್ನಾಟಕದಲ್ಲಿ ಗೆದ್ದೇ ಗೆಲ್ಲುತ್ತೇವೆ ಎಂಬ ಭರವಸೆಯನ್ನು ಹುಸಿಗೊಳಿಸಿ ಕಾಂಗ್ರೆಸ್ ಗೆ ಆಶೀರ್ವಾದ ಮಾಡಿದಿರಿ.

ಅಭಿವೃದ್ಧಿಗೆ ಆದ್ಯತೆ ನೀಡಿಲ್ಲ

ಸಮ್ಮಿಶ್ರ ಸರ್ಕಾರದಲ್ಲಿ ಮುಖ್ಯಮಂತ್ರಿಯಾಗಿ ಹೆಚ್.ಡಿ. ಕುಮಾರಸ್ವಾಮಿ ಹಾಗೂ 3 ವರ್ಷ 10 ತಿಂಗಳು ಆಡಳಿತ ಮಾಡಿದ ಬಿಜೆಪಿ ಸರ್ಕಾರ ಏನೂ ಮಾಡಿಲ್ಲ. ಯಡಿಯೂರಪ್ಪ , ಬಸವರಾಜ ಬೊಮ್ಮಾಯಿ ಇಬ್ಬರೂ ಮುಖ್ಯಮಂತ್ರಿಗಳಾದರೂ ಅಭಿವೃದ್ಧಿಗೆ ಆದ್ಯತೆ ನೀಡಿಲ್ಲ.

3ನೇ ಪುಟಕ್ಕೆ.....

ನಾನು ಪಕ್ಷಾಂತರಿ ಆದರೆ ತತ್ವಾಂತರಿ ಅಲ್ಲ

ದಲಿತ ನಾಯರಾಗಿದ್ದ, ತುಳಿತಕ್ಕೆ ಒಳಗಾದ ಪರವಾಗಿ ಸದಾ ಧ್ವನಿ ಎತ್ತುತ್ತಿದ್ದ, ನೇರ–ನಿಷ್ಠುರವಾದಿಯಾಗಿದ್ದ ಪ್ರಸಾದ್ ಅವರು ಸಾಕಷ್ಟು ಬಾರಿ ನಾನು ಹಲವಾರು ಪಕ್ಷಗಳನ್ನು ಬದಲಿಸಿರಬಹುದು ಆದರೆ ತತ್ವ ಬಿಟ್ಟಿಲ್ಲ, ನಾನು ಪಕ್ಷಾಂತರಿ ಆಗಿರಬಹುದು ಆದರೆ ತತ್ವಾಂತರಿಯಾಗಿಲ್ಲ, ಸ್ವಾಭಿಮಾನ ಬಿಟ್ಟಿಲ್ಲ ಎನ್ನುತ್ತಿದ್ದರು. ಅದರಂತೆ, ನಡೆದುಕೊಂಡರು ಕೂಡ. ರಾಜಕೀಯ ಜೀವನದಲ್ಲಿ ಸ್ವಾಭಿಮಾನಕ್ಕೆ ಧಕ್ಕೆ ಉಂಟಾದಾಗ ಬಂಡಾಯವೆದ್ದಿದ್ದಾರೆ , ಪಕ್ಷ ಯಾವುದೇ ಇರಲಿ, ನಾಯಕ ಯಾರೇ ಇರಲಿ ಅವರನ್ನು ಬಿಟ್ಟು ಹೊರನಡೆದಿದ್ದು ಸ್ವಾಭಿಮಾನಿ ರಾಜಕಾರಣಿ ಎಂಥಲೇ ಕರೆಯಿಸಿಕೊಂಡಿದ್ದಾರೆ.

ಚಾಮರಾಜನಗರ: ವಿ.ಶ್ರೀನಿವಾಸಪ್ರಸಾದ್ ಒಟ್ಟು 14 ಚುನಾವಣೆಗಳನ್ನು ಎದುರಿಸಿದ್ದು 8 ಚುನಾವಣೆಗಳಲ್ಲಿ ಗೆದ್ದಿದ್ದಾರೆ. 6 ಬಾರಿ ಸಂಸದರಾಗಿ 2 ಬಾರಿ ಶಾಸಕರಾಗಿದ್ದ ಪ್ರಸಾದ್ 7 ಪ್ರಧಾನಿಗಳನ್ನು ಕಂಡಿದ್ದಾರೆ.

ಹೌದು..., 1974 ರಲ್ಲಿ ಮೈಸೂರಿನ ಕೃಷ್ಣರಾಜ ಕ್ಷೇತ್ರದಲ್ಲಿ ಡಿ.ಸತ್ಯನಾರಾಯಣ ನಿಧನದಿಂದ ತೆರವಾಗಿದ್ದ ಸ್ಥಾನಕ್ಕೆ ನಡೆದ ಉಪಚುನಾವಣೆಯಲ್ಲಿ ಎಐಡಿಎಂಕೆ ಬೆಂಬಲದೊಂದಿಗೆ ಪಕ್ಷೇತರ ಅಭ್ಯರ್ಥಿಯಾಗಿ ಪ್ರಸಾದ್ ಕಣಕ್ಕೆ ಇಳಿಯುವ ಮೂಲಕ ರಾಜಕೀಯ ಪ್ರವೇಶ ಮಾಡಿದರು. ಕಾಂಗ್ರೆಸ್ ಎಷ್ಟೇ ಒತ್ತಡ ತಂದರೂ ಸ್ಪರ್ಧೆಯಿಂದ ಹಿಂದೆ ಸರಿಯದೇ ಪೈಪೋಟಿ ನೀಡಿ 4 ನೇ ಸ್ಥಾನವನ್ನು ಆ ಚುನಾವಣೆಯಲ್ಲಿ ಪಡೆದರು. ಇವರು ಒಡ್ಡಿದ್ದ ಸ್ಪರ್ಧೆ ರಾಜಕೀಯ ಧುರುಣರ ಗಮನ ಸೆಳೆದು ಕೊನೆಗೇ 1974 ರಲ್ಲಿ ಸಂಸ್ಥಾ ಕಾಂಗ್ರೆಸ್ ಸೇರಿ ಯುವ ಕಾಂಗ್ರೆಸ್ ನ ಪ್ರಧಾನ ಕಾರ್ಯದರ್ಶಿಯಾಗಿ ಹುರುಪಿನಿಂದ ಸಂಘಟನೆ ಮಾಡಿ ಗಮನ ಸೆಳೆದರು.

ತುರ್ತು ಪರಿಸ್ಥಿತಿ ಬಳಿಕ ಜಯಪ್ರಕಾಶ್ ಕರೆ ನೀಡಿದಂತೆ ವಿಪಕ್ಷಗಳು ಸೇರಿ ಒಂದು ಪಕ್ಷ– ಒಂದು ಧ್ವಜ ರಚಿಸಿಕೊಂಡು ಜನತಾ ಪಕ್ಷ ಅಸ್ತಿತ್ವಕ್ಕೆ ಬಂದಿತು.

1977 ರಲ್ಲಿ ಚಾಮರಾಜನಗರ ಲೋಕಸಭಾ ಕ್ಷೇತ್ರದಿಂದ ಲೋಕದಳ ಅಭ್ಯರ್ಥಿಯಾಗಿ ಕಣಕ್ಕಿಳಿದು ಬಿ.ರಾಚಯ್ಯ ವಿರುದ್ಧ ಪರಾಭವಗೊಂಡರು.

1978 ರಲ್ಲಿ ಟಿ.ನರಸಿಪುರ ಕ್ಷೇತ್ರದಿಂದ ಜನತಾ ಪಕ್ಷದ ಅಭ್ಯರ್ಥಿಯಾಗಿ ಕಣಕ್ಕಿಳಿದರು. ಆದರೆ, ಇಂದಿರಾ ಕಾಂಗ್ರೆಸ್ ನ ಅಭ್ಯರ್ಥಿ 28,061 ಮತಗಳನ್ನು ಪಡೆದ ಪಿ.ವೆಂಕಟರಮಣ ಗೆದ್ದರೇ ಶ್ರೀನಿವಾಸಪ್ರಸಾದ್ 20,034 ಪಡೆದು ಮೂರನೇ ಚುನಾವಣೆಯಲ್ಲೂ ಪರಾಭವಗೊಂಡರು.

1980 ರ ವೇಳೆಗೆ ಕಾಂಗ್ರೆಸ್ ಪಕ್ಷಕ್ಕೆ ಸೇರಿದ ಶ್ರೀನಿವಾಸ ಪ್ರಸಾದ್ ಅವರು ಚಾಮರಾಜನಗರ ಲೋಕಸಭಾ ಕ್ಷೇತ್ರದಿಂದ ಕಣಕ್ಕೆ ಇಳಿದು ಬಿ.ರಾಚಯ್ಯ ವಿರುದ್ಧ ಗೆದ್ದು ಮೊದಲ ಬಾರಿ ಸಂಸತ್ ಸದಸ್ಯರಾದರು. ಆ ಚುನಾವಣೆಯಲ್ಲಿ ಪ್ರಸಾದ್ 2,28,748 ಮತಗಳನ್ನು ಪಡೆದರೇ ಸಮೀಪದ ಪ್ರತಿಸ್ಪರ್ಧಿ ಕಾಂಗ್ರೆಸ್–ಯುನ ಬಿ.ರಾಚಯ್ಯ ಅವರಿಗೆ 1,18,287, ಜನತಾ ಪಕ್ಷದ ಸಿದ್ದಯ್ಯಗೆ 36 ಸಾವಿರ ಮತಗಳು ಬಂದಿದ್ದವು. ಚಾಮರಾಜನಗರ ಲೋಕಸಭಾ ಕ್ಷೇತ್ರದಲ್ಲಿ ಸ್ಪರ್ಧೆ ಮಾಡಲು ಠೇವಣಿ ಹಣವನ್ನು ತಾಯಿ ಕೊಟ್ಟು ಶುಭ ಹಾರೈಸಿದ್ದರು ಎಂದು ತಮ್ಮ ಸ್ವಾಭಿಮಾನಿಯ ನೆನಪುಗಳು ಎಂಬ ತಮ್ಮ ಜೀವನಗಾಥೆಯಲ್ಲಿ ಪ್ರಸಾದ್ ದಾಖಲಿಸಿದ್ದಾರೆ.

ಮೊದಲ ಬಾರಿ 1980 ರಲ್ಲಿ ಸಂಸದರಾದ ಬಳಿಕ ಪ್ರಸಾದ್ 1984, 1989, 1991 ಹೀಗೆ ಸತತ ನಾಲ್ಕು ಚುನಾವಣೆಗಳಲ್ಲಿ ಜಯಗಳಿಸಿದರು.

1984 ರಲ್ಲಿ ಜನತಾಪಕ್ಷದ ಮಲ್ಲೇಶಯ್ಯ,

ಕಾಯಕಯೋಗಿ

30/04/2024
ಮಂಗಳವಾರ

ಲಯನ್ಸ್‌ಕ್ಲಬ್ ಪದಾಧಿಕಾರಿಗಳಿಗೆ ಪ್ರತಿಜ್ಞಾವಿಧಿ ಬೋಧನೆ



ಮಂಡ್ಯ: ನಗರದ ಕರ್ನಾಟಕ ಸಂಘದ ಆವರಣದಲ್ಲಿರುವ ಕೆ.ವಿ. ಶಂಕರಗೌಡ ಶತಮಾನೋತ್ಸವ ಭವನದಲ್ಲಿ ನಡೆದ ಅಸೋಸಿಯೇಷನ್ ಆಫ್ ಲಯನ್ಸ್ ಕ್ಲಬ್ ಇಂಟರ್ನ್ಯಾಷನಲ್ ಕ್ಲಬ್ ಗಳ 2024–25ನೇ ಸಾಲಿನ ನೂತನ ಪದಾಧಿಕಾರಿಗಳಿಗೆ ಪ್ರತಿಜ್ಞಾನ ವಿಧಿ ಬೋಧನೆ, ಹೊಸ ಕ್ಲಬ್ ಗಳ ಉದ್ಘಾಟನೆ ಹಾಗೂ ಸೇವಾ ಚಟುವಟಿಕೆಗಳ ಕಾರ್ಯಕ್ರಮವು ಕ್ಲಬ್ ನ ಅಂತರರಾಷ್ಟ್ರೀಯ ನಿರ್ದೇಶಕರಾದ ಡಾ. ನಾಗರಾಜ್ ವಿ. ಬೈರಿ ರವರ ಅಧ್ಯಕ್ಷತೆಯಲ್ಲಿ ಜರುಗಿತು. ಕಾರ್ಯಕ್ರಮದಲ್ಲಿ ವಿವಿಧ ಬಗೆಯ ಕ್ಲಬ್ ಗಳ ಲೋಗೋ ಬಿಡುಗಡೆ ಹಾಗೂ ಅತಿ ಹೆಚ್ಚು ಅಂಕವನ್ನು ಗಳಿಸಿದ ವಿದ್ಯಾರ್ಥಿಗಳಿಗೆ ಅಭಿನಂದಿಸಲಾಯಿತು. ಈ ಸಂದರ್ಭದಲ್ಲಿ ಜಿಲ್ಲಾ ರಾಜ್ಯಪಾಲರಾದ ಕೆ.ಪಿ. ಹನುಮಂತು, ಅಂತರರಾಷ್ಟ್ರೀಯ ಸಮಿತಿಯ ಅಧ್ಯಕ್ಷರಾದ ಅಜಂತರಂಗಸ್ವಾಮಿ, ಕೆ. ಮುನಿಯಪ್ಪ, ನಿರ್ದೇಶಕರಾದ (ಮಾಜಿ) ಜಿ.ಪಿ. ದಿವಾಕರ್, ಒಂದನೇ ರಾಜ್ಯಪಾಲ ಹೆಚ್. ಮಾದೇಗೌಡ, ಎರಡನೇ ಉಪರಾಜ್ಯಪಾಲ ಕೆ.ಆರ್. ಶಶಿಧರ ಈಚಗೆರೆ, ಕಾರ್ಯದರ್ಶಿ ಕೆ.ಎಸ್. ರಾಜಶೇಖರ್, ಚೇರ್ಮನ್ ವೈ.ಎಚ್. ರತ್ನಮ್ಮ, ವಲಯಾಧ್ಯಕ್ಷ ಆರ್. ಮಹೇಶ್, ಪ್ರಾಂತೀಯ ಅಧ್ಯಕ್ಷ ಜಲಜಾಕ್ಷಿ, ಶೈಲಜಾ ಶಿವಕುಮಾರ್, ಪ್ರಮೀಳಾ ಕುಮಾರಿ, ಮಹಾಲಕ್ಷ್ಮಿ, ಇನ್ನಿತರರಿದ್ದರು.

ಮನೆ ಬೀಗ ಮುರಿದು 2 ಲಕ್ಷ ಹಣ, ಒಡವೆ ಕಳ್ಳತನ

ಮಂಡ್ಯ: ಮನೆ ಬಾಗಿಲಇನ ಬೀಗ ಮುರಿದು 2 ಲಕ್ಷ ರೂ. ಮೌಲ್ಯದ ಹಣ ಒಡವೆ ಕದ್ದು ಪರಾರಿಯಾಗಿರುವ ಘಟನೆ ಮಂಡ್ಯ ತಾಲ್ಲೂಕಿನ ಬೂದನೂರಿನ ಮಂಗಯ್ಯನಗರ ಬಡಾವಣೆಯಲ್ಲಿ ಜರುಗಿದೆ. ಗ್ರಾಮದ ಸಿದ್ದಮ್ಮ ಎಂಬುವವರ ಮನೆಯಲ್ಲಿ ಈ ಕೃತ್ಯ ನಡೆದಿದ್ದು, ಕಳ್ಳರು ಕಪಾಟಿನಲ್ಲಿ ಇಟ್ಟಿದ್ದ 1.20 ನಗದು ಹಾಗೂ 10 ಗ್ರಾಂ ತೂಕದ ಕಿವಿಯೋಲೆ ಸೇರಿದಂತೆ ಹಲವು ಸಾಮಾಗ್ರಿಗಳನ್ನು ಕದ್ದೊಯ್ದಿದ್ದಾರೆ. ಬಾಡಿಗೆ ಮನೆಯಲ್ಲಿ ವಾಸವಿದ್ದ ಸಿದ್ದಮ್ಮ ಅವರು ಕಾರ್ಯನಿಮಿತ್ತ ನೆಂಟರ ಮನೆಗೆ ಹೊರ ಹೋಗಿದ್ದ ವೇಳೆ ಘಟನೆ ಜರುಗಿದ್ದು, ಬೆಳಿಗ್ಗೆ ಮನೆಗೆ ಬಂದಾಗ ಕೃತ್ಯ ಬೆಳಕಿಗೆ ಬಂದಿದೆ. ಮಂಡ್ಯ ಗ್ರಾಮಾಂತರ ಠಾಣಾ ಪೊಲೀಸರು ಭಾನುವಾರ ಮಹಜರು ನಡೆಸಿ, ದೂರು ದಾಖಲಿಸಿಕೊಂಡಿದ್ದಾರೆ.

ನಾಯಿ ಹೊತ್ತೊಯ್ದು ತಿಂದು ಹಾಕಿದ ಚಿರತೆ

ಮಂಡ್ಯ: ಜಿಲ್ಲೆಯ ಕನಗನಹಳ್ಳಿಯಲ್ಲಿ ನಾಯಿಯೊಂದನ್ನು ಹೊತ್ತೊಯ್ದು ಚಿರತೆ ತಿಂದು ಹಾಕಿರುವ ಘಟನೆ ವರದಿಯಾಗಿದೆ. ಶನಿವಾರ ಮುಂಜಾನೆ 3.30 ಗಂಟೆ ಸುಮಾರಿನಲ್ಲಿ ನಾಯಿಯನ್ನು ಹಿಡಿದು ಸ್ವಲ್ಪ ದೂರ ಎಳೆದೊಯ್ದು ತಿಂದು ಹಾಕಿರುವ ದೃಶ್ಯ ಸಿಸಿ ಟಿವಿಯಲ್ಲಿ ಸೆರೆಯಾಗಿದೆ.

ಮೈಸೂರು– ಕೆ.ಆರ್.ಪೇಟೆ ಮುಖ್ಯ ರಸ್ತೆಯಲ್ಲಿರುವ ಅಂಗಡಿಯೊಂದರ ಮುಂದೆ ಅಳವಡಿಸಿದರುವ ಸಿಸಿ ಕ್ಯಾಮೆರದಿಂದ ಚಿರತೆ ಇರುವುದು ಧೃಡಪಟ್ಟಿದೆ. ಅಲ್ಲದೆ ಶನಿವಾರ ಸಂಜೆ 6 ಗಂಟೆ ಸುಮಾರಿನಲ್ಲಿ ಜಮೀನಿನ ಬಳಿ ತೆರಳಿದ್ದ ರೈತರಿಗೆ ಚಿರತೆ ಕಾಣಿಸಿಕೊಂಡು ಜೀವಭಯ ಹುಟ್ಟಿಸಿದೆ. ಕಳೆದ ಒಂದು ತಿಂಗಳಿನಿಂದ ಗ್ರಾಮದ ಅಸುಪಾಸಿನಲ್ಲಿ ಕಾಣಿಸಿಕೊಂಡಿರುವ ಚಿರತೆ ಬಗ್ಗೆ ಅರಣ್ಯ ಇಲಾಖೆಗೆ ಮಾಹಿತಿ ನೀಡಿದರೂ ಪ್ರಯೋಜನವಾಗಿಲ್ಲ. ಕೊಡಲೇ ಬೋನು ಇರಿಸಿ ಚಿರತೆ ಹಿಡಿಯುವಂತೆ ಗ್ರಾಮಸ್ಥರು ಮನವಿ ಮಾಡಿದ್ದಾರೆ.

ಬಿ.ಶಂಕರೇಗೌಡ ನಿಧನ



ಮಂಡ್ಯ: ತಾಲೂಕು ಬಸರಾಳು ಹೋಬಳಿ ಚಂದಗಾಲು ಗ್ರಾಮದ ಬಿ ಶಂಕರೇಗೌಡ (62) ಭಾನುವಾರ ಬೆಳಗಿನ ಜಾವ ನಿಧನರಾದರು. ಮೃತರು ಪಿ ಇ ಎಸ್ ಕಾನೂನು ಕಾಲೇಜಿನಲ್ಲಿ ಉಪನ್ಯಾಸಕರಾಗಿ ಕೆಲಸ ಮಾಡಿದ್ದರು. ನಂತರ ಮಾದರಿ ರೈತರಾಗಿ ವ್ಯವಸಾಯದಲ್ಲಿ ತೊಡಗಿಸಿಕೊಂಡಿದ್ದರು. ಮಂಡ್ಯದ ಕರ್ನಾಟಕ ಸಂಘದ ನಿರ್ದೇಶಕರಾಗಿ, ರೆಡ್ ಕ್ರಾಸ್ ಸಂಸ್ಥೆಯ ಮುಖ್ಯಸ್ಥರಾಗಿ ಸಾಮಾಜಿಕ ಸೇವೆಯಲ್ಲಿ ತೊಡಗಿಸಿಕೊಂಡಿದ್ದರು.ಮೃತರು ಕೆರಗೋಡು ಮಾಜಿ ಶಾಸಕ ಎನ್ ತಮ್ಮಣ್ಣ ಹಾಗು ಜೆ ಪಂ ಮಾಜಿ ಸದಸ್ಯ ಎನ್ ಶಿವಣ್ಣ ಅವರ ಸೋದರರು. ಮೃತರ ಅಂತಿಮ ದರ್ಶನವನ್ನು ವಿಧಾನ ಪರಿಷತ್ ಮಾಜಿ ಉಪಾಸಭಾಪತಿ ಮರಿತಿಬ್ಬೆಗೌಡ ಸೇರಿದಂತೆ ಸಾವಿರಾರು ಜನ ಪಡೆದರು. ಮೃತರು ಪತ್ನಿ, ಒಬ್ಬ ಪುತ್ರ, ಒಬ್ಬ ಪುತ್ರಿ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಮೃತರ ಅಂತಿಮ ಸಂಸ್ಕಾರವು ಚಂದಗಾಲು ಗ್ರಾಮದ ಅವರ ಜಮೀನಿನಲ್ಲಿ ಭಾನುವಾರ ಮಧ್ಯಾಹ್ನ 3.30 ಕ್ಕೆ ಜರುಗಿತು.

ರಿಲ್ಯಾಕ್ಸ್ ಮೂಡಲ್ಲಿ ಅಭ್ಯರ್ಥಿಗಳು: ಎಲ್ಲೆಲ್ಲೂ ಗೆಲುವಿನ ಲೆಕ್ಕಾಚಾರ

ಮುಗಿದ ಮತದನ: ಎಣಿಕೆಯಷ್ಟೇ ಪ್ರಧಾನ



ಶಿವಯೋಗಿ, ಮಂಡ್ಯ

ಬಿರುಬೇಸಿಗೆ ಬಿಸಿಲಿಗಿಂತಲೂ ಹೆಚ್ಚಾಗಿದ್ದ ಲೋಕಸಭೆ ಚುನಾವಣೆಯ ಕಾವು ಮತದಾನ ಮುಗಿಯುತ್ತಿದ್ದಂತೆಯೇ ಕೊಂಚ ತಣ್ಣಗಾಗಿದೆ. ಕಳೆದೆರಡು ತಿಂಗಳಿಂದ ಅಬ್ಬರಿಸಿ ಬೊಬ್ಬಿರಿದ ಎಲ್ಲಾ ಪಕ್ಷದ ಮುಖಂಡರು ಹಾಗೂ ಅಭ್ಯರ್ಥಿಗಳು ರಿಲ್ಯಾಕ್ಸ್ ಮೂಡ್‌ನಲ್ಲಿದ್ದಾರೆ.

ಮಾಜಿ ಸಿಎಂ ಕುಮಾರಸ್ವಾಮಿ ಸ್ಪರ್ಧೆಯಿಂದ ರಂಗೇರಿದ್ದ ಮಂಡ್ಯ ಚುನಾವಣಾ ಕಣ ಹತ್ತುಹಲವು ರೋಚಕ ತಿರುವುಗಳೊಂದಿಗೆ ರಂಗೇರಿತ್ತು. ಕಾಂಗ್ರೆಸ್ ಪಕ್ಷದ ಜಿಲ್ಲಾನಾಯಕತ್ವದ ಹೊಣೆ ಹೊತ್ತಿರುವ ಸಚಿವ ಎನ್. ಚಲುವರಾಯಸ್ವಾಮಿ ತಮ್ಮ ಎಲ್ಲಾ ಶಾಸಕರ ಬಣದೊಂದಿಗೆ ಉದ್ಯಮಿ 'ಸ್ಟಾರ್‌ಚಂದ್ರು' ಕಣಕ್ಕಿಳಿಸಿ ಹೊಸ ಪ್ರಯೋಗದಲ್ಲಿ ಯಶಸ್ಸು ಕಾಣುವ ಹಂಬಲ ಫಲ ಕೊಡಲಿದೆಯೆ ಕಾದು ನೋಡಬೇಕಿದೆ.

'ಜನಮತ ಹಬ್ಬ' ಯಶಸ್ವಿ ಬೆನ್ನಲ್ಲೇ 'ಮತ ಭವಿಷ್ಯ' ದ ಲೆಕ್ಕಾಚಾರ ಶುರುವಾಗಿದೆ. ಅಭ್ಯರ್ಥಿಗಳು, ನಾಯಕರು ತುಸು ರಿಲ್ಯಾಕ್ಸ್ ಮೂಡಿಗೆ ಜಾರಿದ್ದಾರೆ. ಕುಟುಂಬದ ಜೊತೆ ಸಮಯ ಕಳೆಯುತ್ತಿದ್ದಾರೆ. ಮಂಡ್ಯ ಜೆಡಿಎಸ್ ಅಭ್ಯರ್ಥಿ ಎಚ್‌ಡಿಕೆ ಓದಿನಲ್ಲಿ ತಲ್ಲೀನರಾಗಿದ್ದಾರೆ. ಆದರೆ, ತಳಮಟ್ಟದಲ್ಲಿಸ್ಥಳೀಯ ನಾಯಕರು, ಕಾರ್ಯಕರ್ತರು ತಮ್ಮ ತಮ್ಮ ಬೂತ್ ಮಟ್ಟದಲ್ಲಿಯಾರಿಗೆ ಎಷ್ಟು ಮತ ಬಿದ್ದಿವೆ ಎಂಬ ಮುನ್ನೋಟದ ಚರ್ಚೆಯಲ್ಲಿ ತೊಡಗಿದ್ದಾರೆ.

ಚುನಾವಣೆ ಸಮಯದಲ್ಲಿ ಇವರ ಮೊಬೈಲ್‌ಗಳು ಕ್ಷಣಕ್ಷಣಕ್ಕೂರಿಂಗಣಿಸುತ್ತಿದ್ದವು.ಮತದಾನಮುಗಿಯುತ್ತಿದ್ದಂತೆ ಬಹುತೇಕ ಮಂದಿಯ ಮೊಬೈಲ್ ಫೋನ್‌ಗಳು 'ಸ್ವಿಚ್ಡ್ ಆಫ್ ಹಾಗೂ ನಾಟ್ ರೀಚಬಲ್' ಆಗಿವೆ. ಕೆಲವರ ಮೊಬೈಲ್‌ಗಳು ರಿಂಗಣಿಸುತ್ತಿದ್ದರೂ ಕರೆ ಸ್ವೀಕರಿಸುತ್ತಿರಲಿಲ್ಲ. ಉಳಿದ ಬಹುತೇಕ ಪಕ್ಷೇತರ ಅಭ್ಯರ್ಥಿಗಳು ಕೂಡ ಎಂದಿನಂತೆ ತಮ್ಮ ದೈನಂದಿನ ಕಾರ್ಯ ಚಟುವಟಿಕೆಯಲ್ಲಿ ತೊಡಗಿದ್ದರು.

'ಡಿಎಸ್ ಅಭ್ಯರ್ಥಿ, ಮಾಜಿ ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ, ಕಾಂಗ್ರೆಸ್ ಅಭ್ಯರ್ಥಿ ವೆಂಕಟರಮಣೇಗೌಡ(ಸ್ಟಾರ್ ಚಂದ್ರು) ಸೇರಿದಂತೆ 14 ಮಂದಿ ಕಣದಲ್ಲಿದ್ದರು. ಇಷ್ಟು ಮಂದಿಯ ಪೈಕಿ ಚುನಾವಣಾ ಕಣದಲ್ಲಿ ಅಬ್ಬರಿಸಿದವರು ಕುಮಾರಸ್ವಾಮಿ ಮತ್ತು ಸ್ಟಾರ್ ಚಂದ್ರು. ಉಳಿದವರು ತಮ್ಮ ವ್ಯಾಪ್ತಿಯಲ್ಲಿ ಯಾವುದೇ ಅಬ್ಬರವಿಲ್ಲದೆ ತಣ್ಣಗೆ ಪ್ರಚಾರದಲ್ಲಿ ತೊಡಗಿದ್ದರು.

ಬೆರು ಬಿಸಿಲ ಬೇಸಿಗೆಯ ನಡುವೆಯೂ ಕಾಂಗ್ರೆಸ್ ಅಭ್ಯರ್ಥಿ ಕಳೆದ ಎರಡು ತಿಂಗಳಿಗೂ ಹೆಚ್ಚು ಕಾಲ ಕ್ಷೇತ್ರದಲ್ಲಿ ನಿರಂತರವಾಗಿ ಸುತ್ತಾಡಿ ಪ್ರಚಾರ ನಡೆಸಿದ್ದರು. ಮತದಾನದ ಬಳಿಕ ಇವರು ಬೆಂಗಳೂರಿನ ಸಂಜಯನಗರ ನಿವಾಸದಲ್ಲಿ ಕುಟುಂಬದವರೊಂದಿಗೆ ಶನಿವಾರ ಕಾಲ ಕಳೆದರು. ಇವರೊಂದಿಗೆ ಪ್ರಚಾರದಲ್ಲಿ ತೊಡಗಿದ್ದ ಜಿಲ್ಲಾಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಹಾಗೂ ಜಿಲ್ಲೆಯ ಎಲ್ಲ ಶಾಸಕರು, ಸ್ಟಾರ್ ಪ್ರಚಾರಕರು ಇದೀಗ ಫುಲ್ ರೆಸ್ಟ್‌ನಲ್ಲಿದ್ದಾರೆ.

ಇನ್ನು ಜೆಡಿಎಸ್ ಅಭ್ಯರ್ಥಿಯಾಗಿ ಎಚ್.ಡಿ. ಕುಮಾರಸ್ವಾಮಿ ಅವರ ಹೆಸರು ಕಡೆಯ ಕ್ಷಣದಲ್ಲಿ ಘೋಷಣೆಯಾಗಿತ್ತು. ಹೀಗಾಗಿ ನಾಮಪತ್ರ ಸಲ್ಲಿಸಿದ ಬಳಿಕ ಅವರು ಸಕ್ರಿಯವಾಗಿ ಪ್ರಚಾರ ಆರಂಭಿಸಿದ್ದೇ ಏ.16ರಿಂದ. ಏ.24ರವರೆಗೆ 9 ದಿನಗಳ ಕಾಲ ನಿರಂತರ ಪ್ರಚಾರದಲ್ಲಿ ತೊಡಗಿದ್ದ ಅವರೂ ಮತದಾನ ದಿನದಂದು ಮದ್ದೂರು ತಾಲೂಕಿನಲ್ಲಿ ಪ್ರವಾಸ ನಡೆಸಿ, ಬಿಡದಿ ಬಳಿಯ ಕೇತಿಗಾನಹಳ್ಳಿಯ ತೋಟದ ನಿವಾಸಕ್ಕೆ ತೆರಳಿದ್ದರು. ಚುನಾವಣೆ ದಿನವೇ ಸಂಜೆ ತೋಟದಲ್ಲಿ ಸುತ್ತಾಡಿ ರಿಲ್ಯಾಕ್ಸ್ ಮೂಡ್‌ಗೆ ಜಾರಿದ್ದರು. ಮತ್ತೆ ಶನಿವಾರ ಬೆಳಗ್ಗೆ ಬೆಂಗಳೂರಿನ ಜೆ.ಪಿ.ನಗರ ನಿವಾಸದಲ್ಲಿದ್ದು ಪಕ್ಷದ ಮುಖಂಡರನ್ನು ಭೇಟಿಯಾಗಿ ಚುನಾವಣೆ, ಮತದಾನದ ಬಗ್ಗೆ ಸಮಾಲೋಚಿಸಿದರು. ಒಂದಷ್ಟು ಜನರಿಗೆ ದೂರವಾಣಿಯಲ್ಲೂ ಮಾತನಾಡಿದರು.

ಬಹುಸಂಖ್ಯಾತ–ಅಹಿಂದ ಓಟ್‌ಬ್ಯಾಂಕ್ ಕಾಗುಣಿತ

ಒಕ್ಕಲಿಗರ ಪ್ರಾಭಲ್ಯದ ಮಂಡ್ಯ ಜಿಲ್ಲೆಯಲ್ಲಿ ಒಕ್ಕಲಿಗೇತರರ 'ಓಟ್‌ಬ್ಯಾಂಕ್' ಜಾಗೃತಿ ಈ ಬಾರಿ ಚುನಾವಣೆಯಲ್ಲಿ ನಿರ್ಣಾಯಕ ಪಾತ್ರ ವಹಿಸಿದ್ದಾರೆಂಬ ಲೆಕ್ಕಾಚಾರದ ಹಿನ್ನೆಲೆಯಲ್ಲಿ ಸೋಲು–ಗೆಲುವಿನ ಲೆಕ್ಕಾಚಾರ ಪ್ರಭಲವಾಗಿ ನಡೆದಿದೆ. ಕಾಂಗ್ರೆಸ್ ಪಕ್ಷದ ಪರ ಅಹಿಂದ ಮತಗಳು ಕ್ರೂಢಿಕೃತವಾಗಿ ಗೆಲುವು ತಂದುಕೊಡಲಿವೆ ಎಂಬ ಕಾಗುಣಿತವೂ ನಡೆದಿದೆ. ಬಿಜೆಪಿ ಪರವಾಗಿಯೇ ಇರುವ ಲಿಂಗಾಯತ, ಬ್ರಾಹ್ಮಣ, ಮತಗಳು ಜೆಡಿಎಸ್ ಅಭ್ಯರ್ಥಿ ಎಚ್‌ಡಿಕೆ ಪರವಾಗಿ ವಾಲಿವೆ ಎಂಬ ಮಾತುಗಳು ಕೇಳಿಬರುತ್ತಿವೆ. ಎಲ್ಲಾ ಕಡೆ ಎಂದಿನಂತೆ ಮತದಾನ ಹಿಂದಿನ ದಿನ ನಡೆದ 'ಕ್ಯಾಶ್–ಕ್ಯಾಸ್ಟ್' ಪ್ರಯೋಗಾಸ್ತ್ರ ಸಹ ಗೆಲುವು–ಸೋಲಿಗೆ ಕಾರಣವಾಗಿದೆ. ಜಿಲ್ಲೆಯ ಬಹುಸಂಖ್ಯಾತ ಒಕ್ಕಲಿಗರ ಮತಗಳನ್ನು ಹೆಚ್ಚು ಪಡೆಯುವ ಅಭ್ಯರ್ಥಿಗೆ ಜಯದ ಮಾಲೆ ಖಚಿತ ಎಂಬ ಮಾತುಗಳು ಸಕ್ಕರೆನಾಡಿನ ಸಾರ್ವಜನಿಕ ವಲಯದ ಅಭಿಪ್ರಾಯವಾಗಿದೆ.

ಸಾಲಬಾಧೆಗೆ ಅನ್ನದಾತ ಬಲಿ

ಕೆ.ಆರ್.ಪೇಟೆ: ಸಾಲದ ಬಾಧೆ ತಾಳಲಾರದೇ ಆತ್ಮಹತ್ಯೆಗೆ ಶರಣಾಗಿರುವ ಘಟನೆ ಮಂಡ್ಯ ಜಿಲ್ಲೆಯ ಕೆ.ಆರ್.ಪೇಟೆ ತಾಲ್ಲೂಕಿನ ಮುರುಕನಹಳ್ಳಿ ಗ್ರಾಮದಲ್ಲಿ ನಡೆದಿದೆ.

ಮುರುಕನಹಳ್ಳಿ ಗ್ರಾಮದ ಗೋವಿಂದಾಚಾರಿ ಮಗ ನಾಗರಾಜಾಚಾರಿ(60) ಆತ್ಮಹತ್ಯೆಗೆ ಶರಣಾದ ರೈತ. ನಾಗರಾಜಚಾರಿ ಅವರು ಶುಕ್ರವಾರ ಬೆಳಿಗ್ಗೆ ಮುರುಕನಹಳ್ಳಿ ಗ್ರಾಮದಲ್ಲಿ ಮತದಾನ ಮಾಡಿದ ನಂತರ ಪಾಂಡವಪುರ ತಾಲೂಕು ಚಿನಕುರಳಿ ಹೋಬಳಿಯ ಬೇಬಿ ಗ್ರಾಮದ ಬೆಟ್ಟದ ತಪ್ಪಲಿನ ನಿರ್ಜನ ಪ್ರದೇಶದಲ್ಲಿ ಮರಕ್ಕೆ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡು ಸಾವನಪ್ಪಿದ್ದಾರೆ. ಮೃತ ನಾಗರಾಜಾಚಾರಿ ಮುರುಕನಹಳ್ಳಿ ಗ್ರಾಮದ ಸರ್ವೆ ನಂ.230ರಲ್ಲಿದ್ದ ಸುಮಾರು 1ಎಕರೆ ಜಮೀನಿನಲ್ಲಿ ಕೊಳವೆ ಬಾವಿ ಕೊರೆಸಿ ತರಕಾರಿ ಬೆಳೆಗಳನ್ನು ಬೆಳೆದು ಜೀವನ ನಡೆಸುತ್ತಿದ್ದರು. ಇದಕ್ಕಾಗಿ ಮುರುಕನಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದಲ್ಲಿ 50 ಸಾವಿರ ಸಾಲ, ಮನೆಯ ಮೇಲೆ ಖಾಸಗಿ ಬ್ಯಾಂಕ್ ನಲ್ಲಿ ಸಾಲ, ಜೊತೆಗೆ ಸಂಘ ಸಂಸ್ಥೆಗಳಲ್ಲಿ ಸೇರಿ ಸುಮಾರು ಐದಾರು ಲಕ್ಷ ರೂಪಾಯಿಗಳನ್ನು ಸಾಲ ಮಾಡಿದ್ದರು. ಬರಗಾಲದ ಹಿನ್ನೆಲೆಯಲ್ಲಿ ಕೊಳವೆ ಬಾವಿಯಲ್ಲಿ ನೀರು ಬತ್ತಿಹೋಗಿದ್ದ ಕಾರಣ ಯಾವುದೇ ತರಕಾರಿ ಬೆಳೆ ಬೆಳೆಯಲು ಸಾಧ್ಯವಾಗಿರಲಿಲ್ಲ. ಇದರಿಂದ ಸಾಲ ತೀರಿಸುವ ಮಾರ್ಗ ಕಾಣದೇ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಮೃತ ನಾಗರಾಜಾಚಾರಿ ಅವರ ಮಗ ಮಂಜುನಾಥ್ ಅವರು ಚಿನಕುರಳಿ ಪೋಲೀಸರಿಗೆ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ. ಮೃತ ರೈತ ನಾಗರಾಜಾಚಾರಿ ಅವರು ತಮ್ಮ ಜಮೀನಿನಲ್ಲಿ ತರಕಾರಿ ಬೆಳೆದು ಕುಟುಂಬ ನಿರ್ವಹಣೆ ಮಾಡುತ್ತಿದ್ದರು, ಆದರೆ ಬರಗಾಲದ ಹಿನ್ನೆಲೆಯಲ್ಲಿ ಕೊಳವೆಬಾವಿಯಲ್ಲಿ ಅಂತರ್ಜಲ ಕಡಿಮೆಯಾದ ಯಾವುದೇ ಬೆಳೆ ಬೆಳೆಯಲು ಸಾಧ್ಯವಾಗದೇ ಮನ ನೊಂದು ಆತ್ಮಹತ್ಯೆಗೆ ಶರಣಾಗಿದ್ದಾರೆ. ಹಾಗಾಗಿ ಸರ್ಕಾರವು ರೈತನ ಕುಟುಂಬಕ್ಕೆ ಸೂಕ್ತ ಪರಿಹಾರ ನೀಡಬೇಕು ಎಂದು ಮುರುಕನಹಳ್ಳಿ ಗ್ರಾಮಸ್ಥರು ಒತ್ತಾಯಿಸಿದ್ದಾರೆ.

ಪರೀಕ್ಷಾ ಕೇಂದ್ರದ ಸುತ್ತ ನಿಷೇಧಾಜ್ಞೆ

ಮಂಡ್ಯ: ಮಂಡ್ಯ ಜಿಲ್ಲಾ ವ್ಯಾಪ್ತಿಯಲ್ಲಿ ದ್ವಿತೀಯ ಪಿಯುಸಿ ಪರೀಕ್ಷೆ – 2 ಏಪ್ರಿಲ್ 29 ರಿಂದ ಮೇ 16 ರವರೆಗೆ ನಡೆಯಲಿದೆ. ದ್ವಿತೀಯ ಪಿಯುಸಿ ಪರೀಕ್ಷೆ – 2 ಅನ್ನು ಸುಗಮವಾಗಿ ನಡೆಯಲು ಮಂಡ್ಯ ಜಿಲ್ಲೆಯ 08 ಪರೀಕ್ಷಾ ಕೇಂದ್ರಗಳ ಸುತ್ತಮುತ್ತ ಪರೀಕ್ಷಾ ದಿನಗಳಂದು 200 ಮೀಟರ್ ವ್ಯಾಪ್ತಿಯ ಪ್ರದೇಶವನ್ನು ನಿಷೇಧಿತ ಪ್ರದೇಶವೆಂದು



ಘೋಷಿಸಿದೆ. ಪರೀಕ್ಷಾ ಕೇಂದ್ರಗಳ ಸುತ್ತಮುತ್ತ ಇರುವ ಜೆರಾಕ್ಸ್ ಮತ್ತು ಸೈಬರ್ ಅಂಗಡಿಗಳನ್ನು ಪರೀಕ್ಷಾ ಅವಧಿಯಲ್ಲಿ ಮುಚ್ಚುವಂತೆ ಜಿಲ್ಲಾಧಿಕಾರಿ ಡಾ.ಕುಮಾರ ಅವರು ಆದೇಶ ಹೊರಡಿಸಿದ್ದಾರೆ. ಪರೀಕ್ಷಾರ್ಥಿಗಳು ಮತ್ತು ಪರೀಕ್ಷಾ ಕಾರ್ಯಕ್ಕೆ ನೇಮಕಗೊಂಡ ಅಧಿಕಾರಿಗಳು/ಸಿಬ್ಬಂದಿಗಳು ಹೊರತುಪಡಿಸಿ ಇತರರು ಯಾರೂ ನಿಷೇಧಿತ ಪ್ರದೇಶದೊಳಗೆ ಪ್ರವೇಶಿಸುವಂತಿಲ್ಲ ಎಂದು ಅವರು ಆದೇಶದಲ್ಲಿ ತಿಳಿಸಿದ್ದಾರೆ.

ಪರೀಕ್ಷಾ ಕೇಂದ್ರಗಳು: ಮಂಡ್ಯ ಮಾಂಡವ್ಯ ಸರ್ಕಾರಿ ಪದವಿ ಪೂರ್ವ ಕಾಲೇಜು, ಮಂಡ್ಯ ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜು ಕಲ್ಲು ಕಟ್ಟಡ , ಮದ್ದೂರು ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜು, ಮಳವಳ್ಳಿ ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜು, ಕೆಆರ್ ಪೇಟೆ ಸರ್ಕಾರಿ ಪದವಿ ಪೂರ್ವ ಕಾಲೇಜು, ನಾಗಮಂಗಲ ಸರ್ಕಾರಿ ಪದವಿ ಪೂರ್ವ ಕಾಲೇಜು, ಶ್ರೀರಂಗಪಟ್ಟಣ ಸರ್ಕಾರಿ ಪದವಿ ಪೂರ್ವ ಕಾಲೇಜು, ಪಾಂಡವಪುರ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಪರೀಕ್ಷೆ ನಡೆಯಲಿದೆ.

ಸಂಗೀತದಿಂದ ಮಾನಸಿಕ ಒತ್ತಡ ನಿವಾರಣೆ



ಮಂಡ್ಯ : ಸಂಗೀತ ಮನಸ್ಸಿಗೆ ಮುದ ನೀಡುವುದರ ಜೊತೆಗೆ ಮಾನಸಿಕ ಒತ್ತಡದಿಂದಲೂ ದೂರ ಮಾಡುವ ಸಿದ್ಧ ಔಷಧಿಯಾಗಿ ಬಳಕೆಯಾಗುತ್ತಿದೆ ಎಂದು ಕರ್ನಾಟಕ ರಕ್ಷಣಾ ವೇದಿಕೆ ಮಾಜಿ ಅಧ್ಯಕ್ಷ ಕೆ.ಟಿ. ಶಂಕರೇಗೌಡ ತಿಳಿಸಿದರು.

ನಗರದ ಗಾಂಧಿ ಭವನದಲ್ಲಿ ನಡೆದ ನಗರದ ಹೊಸಹಳ್ಳಿಯ ಗುಡ್‌ವಾಯ್ಸ್ ಸಂಗೀತ ತರಬೇತಿ ಶಾಲೆಯ ವಾರ್ಷಿಕೋತ್ಸವ–ಪ್ರತಿಭಾ ಪ್ರದರ್ಶನ, ಗಣ್ಯರಿಗೆ ಸನ್ಮಾನ–ಸಾಂಸ್ಕೃತಿಕ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಮನುಷ್ಯನಿಗೆ ನೋವು–ದುಃಖ ಅಥವಾ ಸುಖದ ಕ್ಷಣಗಳಲ್ಲಿ ಸಂಗೀತ ಇಂಪು ಜೀವನೋತ್ಸಾಹವನ್ನು ತುಂಬುತ್ತದೆ. ಸಂಗೀತದ ಮಾಧುರ್ಯ ಮನಸ್ಸನ್ನು ಮೃಧುಗೊಳಿಸುತ್ತಾ ಮಾನವೀಯತೆಯ ಕಡೆಗೆ ಮತ್ತು ಹೊಸತನದ ಕಡೆಗೆ ಕೊಂಡೊಯ್ಯುತ್ತದೆ ಎಂದು ವ್ಯಾಖ್ಯಾನಿಸಿದರು.

ಸಂಗೀತವೆಂಬುದು ತಪಸ್ಸಿದ್ಧಂತೆ. ಧ್ಯಾನ, ನಿರಂತರ ಅಧ್ಯಯನದ ಮೂಲಕ ಈ ಕ



ಶ್ರೀರಾಮನ ಪಟ್ಟಾಭಿಷೇಕ ಹಿನ್ನೆಲೆ ಹೋಳಿ ಆಚರಿಸಿ ಕಾವೇರಿ ನದಿಯಲ್ಲಿ ಸ್ನಾನ

ಶ್ರೀರಂಗಪಟ್ಟಣ: ಪಟ್ಟಣದ ಪೂರ್ಣಯ್ಯ ಬೀದಿಯಲ್ಲಿನ ಶ್ರೀ ಪಟ್ಟಾಭಿ ರಾಮನ ದೇವಾಲಯದಲ್ಲಿ ಶ್ರೀರಾಮನ ಪಟ್ಟಾಭಿಷೇಕದ ಅಂಗವಾಗಿ ವಿಶೇಷ ಪೂಜೆಗಳು ಜರುಗಿ, ಹೋಳಿ ಆಚರಣೆ ಮೂಲಕ ಇಲ್ಲಿನ ನಿವಾಸಿಗಳು ಸಂಭ್ರಮಿಸಿದರು.
ವೇಧ ಬ್ರಹ್ಮ ಡಾ.ಭಾನುಪ್ರಕಾಶ್ ಶರ್ಮಾ ನೇತೃತ್ವದಲ್ಲಿ ಇಲ್ಲಿನ ಶ್ರೀರಾಮ ಮಂದಿರದಲ್ಲಿ ಶ್ರೀರಾಮನ ಪಟ್ಟಾಭಿಷೇಕ ಶಾಸ್ತ್ರೋತ್ರವಾಗಿ ನೆರೆವೇರಿಸಲಾಯಿತು. ಶ್ರೀರಾಮನ ಪಟ್ಟಾಭಿಷೇಕ ಪೂಜಾ ಕಾರ್ಯಕ್ರಮದಲ್ಲಿ ಬೀದಿಯ ಎಲ್ಲಾ ನಿವಾಸಿಗಳು ಹಾಗೂ ಶ್ರೀ ರಾಮನ ಭಕ್ತರು ಭಾಗವಹಿಸಿ ಸಂಭ್ರಮಿಸಿದರು. ಬಳಿಕ ಶ್ರೀರಾಮನ ಉತ್ಸವ ಮೂರ್ತಿಯನ್ನು ಪಲ್ಲಕಿಯಲ್ಲಿ ಮೆರವಣಿಗೆ ನಡೆಸಿ ಸಂಭ್ರಮಿಸಿದ ಜನತೆ, ನಂತರ ಬಾಲರಾಮನನ್ನು ತೊಟ್ಟಿಲಲ್ಲಿ ಮಲಗಿಸಿ ಉಯ್ಯಾಲೆ ಮೂಲಕ ಬೀದಿಯಲ್ಲಿ ಮೆರವಣಿಗೆ ನಡೆಸಿ ಸಂಭ್ರಮದ ಹೋಳಿ ಆಚರಣೆ ಮಾಡಿದರು.

ಕಾವೇರಿ ನದಿಯಲ್ಲಿ ಕನಕ ಬಂಡೆ ಪ್ರತ್ಯಕ್ಷ: ಹಬ್ಬ ಆಚರಿಸಲು ಮುಖಂಡರು ತೀರ್ಮಾನ

ಶ್ರೀರಂಗಪಟ್ಟಣ: ಕನಕದಾಸರು ತಪಸ್ಸು ಮಾಡಿ ಜೊತೆಗೆ ಸ್ನಾನದ ಬಳಿಕ ತನ್ನ ಕರುಳನ್ನು ಶುಚಿಗೊಳಿಸಿಕೊಳ್ಳುತ್ತಿದ್ದರು ಎನ್ನಲಾದ ಕನಕ ಬಂಡೆಯೊಂದು



ತಾಲ್ಲೂಕಿನ ಮಹದೇವಪುರ ಗ್ರಾಮದ ಬಳಿಯ ಕಾವೇರಿ ನದಿಯಲ್ಲಿ ಪ್ರತ್ಯಕ್ಷಗೊಂಡಿದೆ. ಇಲ್ಲಿನ ಸೇತುವೆ ಬಳಿ ಕನಕ ಬಂಡೆ ಪ್ರತ್ಯಕ್ಷೊಂಡಿದ್ದು, ಕಾವೇರಿ ನದಿಯಲ್ಲಿ ನೀರಿನ ಪ್ರಮಾಣ ಕಡಿಮೆಯಾಗಿರುವ ಕಾರಣ ಈ ಬಂಡೆ ಗೋಚರವಾಗಿರುವುದಾಗಿ ಸ್ಥಳೀಯರು ತಿಳಿಸಿದ್ದಾರೆ. ಇದಕ್ಕೆ ಪೂರಕವೆಂಬಂತೆ ನದಿಯ ಪಕ್ಕದಲ್ಲಿ ಕನಕದಾಸರ ದೇವಾಲಯವೂ ಸಹ ಇದ್ದು, ಇದೀಗ. ಕನಕ ಬಂಡೆ ಪ್ರತ್ಯಕ್ಷಗೊಂಡಿರುವುದಕ್ಕೆ ಸಮುದಾಯದ ಮುಖಂಡರು ಇನ್ನಿಲ್ಲದ ಹರ್ಷ ವ್ಯಕ್ತಪಡಿಸಿದ್ದಾರೆ. ಕನಕದಾಸರು ಕಾವೇರಿ ನದಿಯಲ್ಲಿ ಸ್ನಾನ ಮುಗಿಸಿ ಈ ಬಂಡೆಯ ಮೇಲೆ ಕುಳಿತು ತಪಸ್ಸು ಮಾಡುತ್ತಿದ್ದರು ಎಂಬುದು ಇಲ್ಲಿನ ಜನರ ನಂಬಿಕೆ ಇಂದಿಗೂ ಜೀವಂತವಾಗಿದೆ.

ಬೇಸಿಗೆ ಶಿಬಿರದ ಮೂಲಕ ಸಂಪ್ರದಾಯದ ಮೈಲುಗಲ್ಲು ಸ್ಥಾಪನೆ

ಶ್ರೀರಂಗಪಟ್ಟಣ: ಕರ್ನಾಟಕದಲ್ಲೇ ಹತ್ತು ವರ್ಷಗಳಿಂದ ಯಶಸ್ವಿಯಾಗಿ ಹಳೆಯ ಸಂಪ್ರದಾಯದ ಬೇಸಿಗೆ ಶಿಬಿರವನ್ನು ನಡೆಸುವ ಮೂಲಕ ನಮ್ಮ ಸಂಪ್ರದಾಯದ ಮೈಲಿಗಲ್ಲು ಸ್ಥಾಪಿಸಿದ್ದಾರೆ ಎಂದು ಡಾ.ಭಾನುಪ್ರಕಾಶ್ ಶರ್ಮ ತಿಳಿಸಿದರು.
ಪಟ್ಟಣದ ವಿದ್ಯಾಭಾರತಿ ಪಬ್ಲಿಕ್ ಶಾಲೆಯ ವತಿಯಿಂದ ಏರ್ಪಡಿಸಿದ್ದ ವ್ಯಕ್ತಿತ್ವ ವಿಕಸನ ಬೇಸಿಗೆ ಶಿಬಿರವಾದ ಅಜ್ಜಿಮನೆ ಶಿಬಿರದಲ್ಲಿ ಭಾಗವಹಿಸಿ ಮಾತನಾಡಿ, ಮಕ್ಕಳಿಗೆ ಯಾವಾಗಲೂ ಅಜ್ಜಿ ಮನೆ ತುಂಬಾ ಇಷ್ಟ, ಹಾಗಾಗಿ ಇಂದಿನ ಕಾಲದಲ್ಲಿ ನಮ್ಮ ಕಾಲದ ಅಜ್ಜಿ ಮನೆ ವಂಚಿತ ಮಕ್ಕಳಿಗಾಗಿಯೇ ನಮ್ಮ ಶಾಲೆಯಲ್ಲಿ ಸನಾತನ ದರ್ಮದ ಅಜ್ಜಿ ಮನೆ ಸಂಪ್ರದಾಯದಲ್ಲಿ ಬೇಸಿಗೆ ಶಿಬಿರ ಪ್ರಾರಂಬಿಸಿ ಇಂದು ಯಶಸ್ವಿ ಹತ್ತು ವರ್ಷಗಳ ಸಾಧನೆ ಗೈದಿದೆ. ಈ ಶಿಬಿರ ಮುಂದೆಯೂ ಹೀಗೆ ಮುಂದುವರೆಯಲಿ ಎಂದು ಅವರು ಹಾರೈಸಿದರು. ನಂತರ ಮಾತನಾಡಿದ ಮೈಸೂರು ಮಹರಾಣಿ ಕಾಲೇಜಿನ ಸಹ ಪ್ರಾದ್ಯಾಪಕರಾದ ಅರಬಿಂದು ಅರ್ಕಸಾಲಿ, ಈ ಶಿಬಿರದಲ್ಲಿ ಮಕ್ಕಳು ಸೇರಿರುವುದು ನಿಜಕ್ಕೂ ನಮ್ಮ ಪುರಾತನ ಸಂಪ್ರದಾಯವನ್ನು ಪಾಲಿಸಿ, ಶಿಬಿರದಲ್ಲಿ ಸಾಕಷ್ಟು ಕಲಿಯುವ ಅವಕಾಶವಿದೆ. ಇಲ್ಲಿ ಮಕ್ಕಳು ನಮ್ಮ ಸಂಪ್ರದಾಯದ ಎಲ್ಲಾ ಆಯಾಮಗಳನ್ನು ಕಲಿಯಲು ಹೆಚ್ಚಿನ ಅನುವು ಮಾಡಿಕೊಟ್ಟಿದೆ. ಈ ಶಿಬಿರದಲ್ಲಿ ಮಕ್ಕಳಿಲು ಹೆಚ್ಚಿನ ವಿದ್ಯಾ ಸಂಪತ್ತು ಪಡೆಯಲಯ ಈ ವಿದ್ಯಾ ಸಂಸ್ಥೆ ಶ್ರಮ ಹಾಕಿದೆ. ನಮ್ಮ ನಾಡಿದ ಕಣ್ಮರೆ ಹಂಚಿನಲ್ಲಿರುವ ಸಾಕಷ್ಟು ದೇಶೀಯ ಕ್ರೀಡೆಗಳನ್ನು ಮಕ್ಕಳು ಇಲ್ಲಿ ಕಲಿತಿದ್ದಾರೆ, ಹಾಗೆಯೇ ಕರಕುಶಲವನ್ನು ಕಲೆಯನ್ನೂ ನಮ್ಮ ಮಕ್ಕಳು ಇಲ್ಲಿ ಕಲಿತಿವೆ ಇದರಿಂದ ಮಕ್ಕಳ ವ್ಯಕ್ತಿತ್ವ ವಿಕಸನದ ಅನಾವರಣವಾಗುತ್ತವೆ. ಶ್ರೀರಂಗಪಟ್ಟಣ ಒಂದು ಪ್ರಾಕೃತಿಕ ಸಂಪತ್ತಾಗಿದೆ ಇಂಥಹ ಪ್ರಾಕೃತಿಕ ಸಂಪತ್ತನ್ನ ನಮ್ಮ ಮಕ್ಕಳಿಗೆ ತಿಳುವಳಿಕೆಯಾಗಿ ನೀಡಿದ್ದು ಮಕ್ಕಳ ಪಾಲಿಗಂತು ಅಜ್ಜಿ ಮನೆ ಶಿಬಿರ ಕಲಿಯಲು ಅಕ್ಷಯಾ ಪಾತ್ರೆಯಂತೆ ಇದೆ ಎಂದರು. ಈ ವೇಳೆ ಮಕ್ಕಳಿಗೆ ಕಳೆದ 15 ದಿನಗಳಿಂದ ವಿವಿಧ ವಿಭಾಗದಲ್ಲಿ ಆಟ ಹಾಗೂ ಕ್ರೀಡೆಗಳನ್ನು ನಡೆಸಿ ಇಲ್ಲಿ ಗೆದ್ದ ಮಕ್ಕಳು ಹಾಗೂ ಪೋಷಕರಿಗೆ ಪ್ರಶಸ್ತಿ ಗಳನ್ನು ವಿತರಿಸಲಾಯಿತು. ಕಾರ್ಯಕ್ರಮದಲ್ಲಿ ಮೈಸೂರಿನ ನಿವೃತ್ತ ಲೆಫ್ಟಿನೆಂಟ್ ಶ್ರೀ ಹರ್ಷ ಕರ್ನಲ್, ಬೆಂಗಳೂರಿನಲ್ಲಿ ಟಿಕ್ಕಾಲಜೀಸ್ ಲಿಮಿಟೆಡ್ ನ ಅಧ್ಯಕ್ಷರು & ವ್ಯವಸ್ಥಾಪಕ ನಿರ್ದೇಶಕರಾದ ಚಂದ್ರಶೇಖರ್ ಎಚ್.ಜಿ ಸೇರಿದಂತೆ ಶಾಲೆಯ ಶಿಕ್ಷಕರು ಸೇರಿದಂತೆ ಪೋಷಕರು ಇದ್ದರು.

ಮನೆಗಳ್ಳತನಕ್ಕೆ ವಿಫಲ ಯತ್ನ

ಶ್ರೀರಂಗಪಟ್ಟಣ: ಮನೆಗಳ್ಳತನಕ್ಕೆ ಯತ್ನಿಸಿ ವಿಫಲಗೊಂಡಿರುವ ಘಟನೆ ಶ್ರೀರಂಗಪಟ್ಟಣ ಹೊರವಲಯದ ಸುಮುಖ ಲೇ ಔಟ್ ನ ಶ್ರೀ ನಿಮಿಷಾಂಬ ನಿಲಯದಲ್ಲಿ ಶನಿವಾರ ಮದ್ಯ ರಾತ್ರಿ ನಡೆದಿದೆ. ಕೆಳ ಅಂತಸ್ತಿನಲ್ಲಿ ಮನೆ ಬಾಡಿಗೆದಾರರು ಇಲ್ಲದಿರುವುದನ್ನು ಅರಿತ ಖದೀಮರು, ಶನಿವಾರ ಮದ್ಯರಾತ್ರಿ ಬಾಗಿಲು ಮುರಿಯುವ ವಿಫಲ ಯತ್ನ ನಡೆಸಿದ್ದಾರೆ. ಅಲ್ಲದೆ ಮೇಲಂತಸ್ತಿನ ಮನೆಯವರು ಹೊರಗಡೆ ಬಾರದಂತೆ ಹೊರಗಡೆಯಿಂದ ಬಾಗಿಲಿನ ಚಿಲಕವನ್ನು ಹಾಕಿದ್ದು ಬಾಗಿಲು ಹೊಡೆಯುವ ಶಬ್ದಕ್ಕೆ ಅಕ್ಕ– ಪಕ್ಕದವರು ಓಡಿ ಬರಲಾಗಿ ಖದೀಮರು ಸ್ಥಳದಿಂದ ಪರಾರಿಯಾಗಿದ್ದಾರೆ. ಈ ಸಂಬಂಧ ಪಟ್ಟಣ ಠಾಣೆಯಲ್ಲಿ ದೂರು ದಾಖಲಾಗಿದ್ದು, ಖದೀಮರನ್ನು ಸೆರೆ ಹುಡಿಯುವುದರ ಜೊತೆಗೆ ರಕ್ಷಣೆ ನೀಡುವಂತೆ ನಿವಾಸಿಗಳು ಮನವಿ ಮಾಡಿದ್ದಾರೆ.

ಬಹಿರಂಗವಾಯ್ತು ಗೌಪ್ಯ ಮತದಾನ

ಮಂಡ್ಯ: ಮತಗಟ್ಟೆ ಅಧಿಕಾರಿಗಳ ನಿರ್ಲಕ್ಷ್ಯದಿಂದಾಗಿ ಗೌಪ್ಯವಾಗಿರಬೇಕಿದ್ದ ಮಂಡ್ಯ ಲೋಕಸಭಾ ಚುನಾವಣೆಯ ಮತದಾನದ ಮಾಹಿತಿ ಬಹಿರಂಗಗೊಳ್ಳುವಂತಾಗಿದೆ. ಜಿಲ್ಲೆಯಲ್ಲಿ ಹಲವು ಪ್ರಕರಣದಲ್ಲಿ ಗೌಪ್ಯ ಮತದಾನ ಬಹಿರಂಗವಾಗಿದ್ದಲ್ಲದೆ, ಅದನ್ನು ಸಾಮಾಜಿಕ ಜಾಲತಾಣದಲ್ಲಿ ಹರಿಬಿಟ್ಟ ಪರಿಣಾಮ ಸಕತ್ ವೈರಲ್ ಆಗಿದೆ.



ಸಾಮಾಜಿಕ ಜಾಲತಾಣದಲ್ಲಿ ವೈರಲ್....!

ಇದರಿಂದ ಚುನಾವಣಾಧಿಕಾರಿಗಳ ಕಾರ್ಯವೈಖರಿ ಬಗ್ಗೆ ಸಾರ್ವಜನಿಕ ವಲಯದಲ್ಲಿ ತೀವ್ರ ಚರ್ಚೆಗೆ ಗ್ರಾಸವಾಗಿದೆ.
ಮತಗಟ್ಟೆಯೊಳಗೆ ಮೊಬೈಲ್, ಕ್ಯಾಮರಾ ತೆಗೆದುಕೊಂಡು ಹೋಗುಚಂತಿಲ್ಲ ಎಂಬ ಕಟ್ಟು ನಿಟ್ಟಿನ ಕ್ರಮವಹಿಸಿದ್ದರೂ, ಮತದಾನ ಮಾಡುವ ದೃಶ್ಯ ಸೆರೆ ಹಿಡಿದು ಸಾಮಾಜಿಕ ಜಾಲತಾಣದಲ್ಲಿ ಹರಿಬಿಟ್ಟರುವುದು ಅಧಿಕಾರಿಗಳ ಕರ್ತವ್ಯವನ್ನು ಪ್ರಶ್ನಿಸುವಂತಾಗಿದೆ. ಅದರಂತೆ ಜಿಲ್ಲಾಡಳಿತವೂ ಈ ಬಗ್ಗೆ ಚುನಾವಣಾ ಕರ್ತವ್ಯಕ್ಕೆ ನಿಯೋಜನೆಗೊಂಡಿದ್ದ ಅಧಿಕಾರಿಗಳಿಗೆ ಸ್ಪಷ್ಟ ಸೂಚನೆ ಕೊಟ್ಟಿತ್ತು. ಆದಾಗ್ಯೂ, ಅಧಿಕಾರಿಗಳು ತಮ್ಮ ಕರ್ತವ್ಯ ನಿರ್ವಹಿಸುವಲ್ಲಿ ವಿಫಲರಾಗಿರುವ ಅನುಮಾನ ಮೂಡತೊಡಗಿದೆ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ವೈರಲ್ ಆಗಿರುವ ವಿಡಿಯೋದಲ್ಲಿ ಬಹುತೇಕ ಎಚ್‌ಡಿಕೆ ಪರ ಮತದಾನ ಮಾಡಿರುವುದು ಕಂಡುಬಂದಿದೆ.

ಡಾ. ಬಿ.ಆರ್. ಅಂಬೇಡ್ಕರ್ ಸಮ ಸಮಾಜದ ನಿರ್ಮಾತೃ

ಪಿರಿಯಾಪಟ್ಟಣ : ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ರವರು ಈ ದೇಶದ ಒಂದು ಮಹಾನ್ ಶಕ್ತಿ ಮತ್ತು ಸಮಾ ಸಮಾಜದ ನಿರ್ಮಾತೃವಾಗಿದ್ದಾರೆ ಎಂದು ಅಂಬೇಡ್ಕರ್ ವಸತಿ ಶಾಲೆಯ ಉಪನ್ಯಾಶಕ ಮತ್ತು ಸಾಹಿತಿ ಪುಟ್ಟು ಮಾದಯ್ಯ ತಿಳಿಸಿದರು.
ತಾಲೂಕಿನ ಸತ್ಯಗಾಲ ಗ್ರಾಮದಲ್ಲಿ ಡಾ. ಬಾಬಾ ಸಾಹೇಬ್ ಬಿ. ಆರ್. ಅಂಬೇಡ್ಕರ್ ಅವರ 133 ನೇ ಜನ್ಮ ದಿನಾಚರಣೆಯನ್ನುದ್ಘಾಟಿಸಿ ಮಾತನಾಡಿದರು.
ಡಾ. ಬಿ.ಆರ್ ಅಂಬೇಡ್ಕರ್ ರವರ ಆದರ್ಶ ತತ್ವಗಳು ಇತರರಿಗೆ ಮಾದರಿಯಾಗಿದ್ದು, ಸಮ ಸಮಾಜದ ನಿರ್ಮಾಣ ಮಾಡುವಲ್ಲಿ ಇವರ ಪಾತ್ರ ಅಪಾರವಾಗಿದೆ. ಭಾರತ ದೇಶಕ್ಕೆ ಸಂವಿಧಾನವನ್ನು ರೂಪಿಸುವುದರ ಮೂಲಕ ಪ್ರತಿ ಸಮುದಾಯಕ್ಕೂ ಹಕ್ಕು ಮತ್ತು ಸ್ವತಂತ್ರವನ್ನು ನೀಡಿ ಪ್ರಜಾಪ್ರಭುತ್ವ ವ್ಯವಸ್ಥೆಯ ಮೂಲಕ ಸಮ ಸಮಾಜವನ್ನು ನಿರ್ಮಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ ಎಂದು ತಿಳಿದರು.
ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ ರವರು ತಮ್ಮ ಅವಿರತ ಪರಿಶ್ರಮದ ಮೂಲಕ ಸಂವಿದಾನವನ್ನು ನೀಡಿ ಇಂದಿಗೂ ಜೀವಂತವಾಗಿದ್ದು, ಸರ್ವಕಾಲಕ್ಕೂ ಶ್ರೇಷ್ಠರಾಗಿದ್ದಾರೆ. ಆದ್ದರಿಂದ ಇವರು ಕೇವಲ ವ್ಯಕ್ತಿಯಲ್ಲ ಪ್ರತಿಯೊಬ್ಬರಿಗೂ ಶಕ್ತಿಯಾಗಿದ್ದಾರೆ ಎಂದರೆ ತಪ್ಪಾಗಲಾರದು. ಶೋಷಿತ ಸಮುದಾಯದಲ್ಲಿ ಜನಿಸಿದ ಇವರು ಸಾಮಾಜಿಕ ಅಸಮಾನತೆ, ಜಾತಿ ಪದ್ಧತಿ ನಿರುದ್ಯೋಗ, ಬಡತನವನ್ನು ಹೋಗಲಾಡಿಸಲು ಬಹಳಷ್ಟು ಶ್ರಮಿಸಿದ್ದಾರೆ. ಈ ಕಾರಣಕ್ಕಾಗಿ ಅನೇಕ ಹೋರಾಟಗಳನ್ನು ಮಾಡುವುದರ ಮೂಲಕ ಸಂವಿಧಾನದಡಿಯಲ್ಲಿ ಪ್ರತಿ ಸಮುದಾಯಕ್ಕೂ ಸಾಮಾಜಿಕ ನ್ಯಾಯವನ್ನು ನೀಡುವಲ್ಲಿ ಪ್ರಮುಖರಾಗಿದ್ದಾರೆ. ಮಾಧ್ಯಮ ಕ್ಷೇತ್ರದಲ್ಲಿ ಅನೇಕ ಪತ್ರಿಕೆಗಳನ್ನು ಹೊರ ತರುವ ಮೂಲಕ ಪ್ರತಿಯೊಬ್ಬರಲ್ಲಿಯೂ ಜಾಗೃತಿಯ ಅರಿವನ್ನು ಮೂಡಿಸಿದರು. ಈ ಕಾರಣಕ್ಕಾಗಿ ವಿಶ್ವಸಂಸ್ಥೆ ಇಂದು ಅಂಬೇಡ್ಕರ್ ಅವರ ಜನ್ಮ ದಿನವನ್ನು ವಿಶ್ವ ಜ್ಞಾನದ ದಿನವೆನ್ನಾಗಿ ಆಚರಣೆ ಮಾಡುತ್ತಿದೆ.
ಆದರೆ ಅನೇಕ ಕಾರಣಗಳಿಂದಾಗಿ ಸಂವಿಧಾನದ ಅವಕಾಶಗಳಿಂದ ಕೆಲವು ಸಮುದಾಯಗಳು ವಂಚಿತರಾಗಿ ಇಂದಿಗೂ ಸಾಮಾಜಿಕವಾಗಿ ಮುಂದೆ ಬರಲು ಸಾಧ್ಯವಾಗುತ್ತಿಲ್ಲ ಎಲ್ಲಾ ಕ್ಷೇತ್ರಗಳನ್ನು ಖಾಸಗಿಕರಣ



ಮಾಡುವುದರ ಮೂಲಕ ಸಂವಿಧಾನದ ಅವಕಾಶಗಳನ್ನು ಪಡೆಯದಂತೆ ಮಾಡಲಾಗುತ್ತಿದೆ. ಆದ್ದರಿಂದ ಪ್ರತಿಯೊಬ್ಬರೂ ಸಂವಿಧಾನದ ಆಶಯಗಳನ್ನು ಅರ್ಥ ಮಾಡಿಕೊಂಡು ಅವಕಾಶಗಳನ್ನು ಪಡೆದುಕೊಳ್ಳಬೇಕು ಮತ್ತು ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ರವರ ಚಿಂತನೆಗಳನ್ನು ಪ್ರತಿಯೊಬ್ಬರು ಮೈಗೂಡಿಸಿಕೊಳ್ಳಬೇಕು ಎಂದು ತಿಳಿಸಿದರು.
ಮಡಿಕೇರಿ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಕಾಲೇಜಿನ ಉಪನ್ಯಾಸಕ ಡಾ. ಸೋಮಣ್ಣ ಮಾತಾಡಿ ಈ ದೇಶದ ಉದ್ಧಾರಕ್ಕಾಗಿ ಮತ್ತು ಶೋಷಿತ ಸಮುದಾಯಗಳನ್ನು ಮುಖ್ಯ ವಾಹಿನಿಗೆ ತರಬೇಕೆಂದು ಹಗಲಿರುಳು ತನ್ನ ಸಮುದಾಯ ಹಾಗೂ ದೇಶಕ್ಕೆ ಯಾವುದೇ ಕಳಂಕ ಬರದ ಹಾಗೆ ಅವರಿಗೆ ಅನೇಕ ಅವಮಾನಗಳನ್ನು ಕೊಟ್ಟರು ಸಹ ಎಲ್ಲವನ್ನು ಸಹಿಸಿಕೊಂಡು ಈ ದೇಶಕ್ಕೆ ಬೃಹತ್ ಸಂವಿಧಾನವನ್ನು ನಮಗೆ ಕೊಡುಗೆಯಾಗಿ ನೀಡಿದ್ದಾರೆ ಅದೇ ರೀತಿ ಅವರನ್ನು ವಿಶ್ವಮಾನವ ತತ್ವಜ್ಞಾನಿ ವಿಶ್ವಗುರು ಸಮ ಸಮಾಜದ ಸುಧಾರಕ ಹೀಗೆ ಅನೇಕ ಬಿರುದುಗಳನ್ನು ನೀಡಿದ್ದಾರೆ ಅವರು ಜಾತಿ ಪದ್ಧತಿ ವಿರುದ್ಧ ಮತ್ತು ಸಮಾಜದಲ್ಲಿ ಇರುವ ಅಸಮಾನತೆಯನ್ನು ಹೋಗಲಾಡಿಸುವ ಸಲುವಾಗಿ ಹೋರಾಟ ಮಾಡಿದ ಮಹಾನ್ ವ್ಯಕ್ತಿ ಅವರ ಆದರ್ಶ ತತ್ವವನ್ನು ಎಲ್ಲರೂ ಮೈಗೂಡಿಸಿಕೊಳ್ಳಬೇಕು ಎಂದರು, ಈ ಸಂದರ್ಭ ಎಸ್ ಕೆ ಎಸ್ ಟಿ ಬಾಲಕಿಯರ ಪ್ರೌಢಶಾಲಾ ವಿಭಾಗದ ಉಪ ಪ್ರಾಂಶುಪಾಲರಾದ ಮಹಾದೇವಪ್ಪ ಎಚ್ ಡಿ ಕೋಟೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಉಪನ್ಯಾಸಕರಾದ ಪುಟ್ಟರಾಜು ಅವರು ಅಂಬೇಡ್ಕರ್ ಬಗ್ಗೆ ಸಂಕ್ಷಿಪ್ತವಾಗಿ ಮಾತಾಡಿದರು . ಈ ಸಂದರ್ಭ ಪಂಚವಳ್ಳಿ ಗ್ರಾಮ ಪಂಚಾಯತಿ ಅಧ್ಯಕ್ಷ ರೂಪ ,ಮೂಲ ನಿವಾಸಿ ಅಂಬೇಡ್ಕರ್ ಸಂಘದ ಜಿಲ್ಲಾ ಸಂಚಲಕರಾದ ಚನ್ನಬಸವಣ್ಣ, ಸುಂದ್ರಯ್ಯ ,ಕರಿಯಯ್ಯ, ಉಪನ್ಯಾಸಕ ನಟರಾಜ್, ರವೀಂದ್ರ ,ರಾಜಮ್ಮ ,ಸಣ್ಣಯ್ಯ, ರಮೇಶ್, ಬಸವರಾಜ್, ಚನ್ನಬಸವಯ್ಯ ಸಾಮಾಜಿಕ ಕ್ರಾಂತಿ ಸೂರ್ಯ ಡಾ ಬಿಆರ್ ಅಂಬೇಡ್ಕರ್ ಯುವಕ ಸಂಘದ ಗೌರವ ಅಧ್ಯಕ್ಷ ಪಿ ರವಿ, ಅಧ್ಯಕ್ಷ ಸತೀಶ್ ಎಸ್ ಆರ್, ಉಪಾಧ್ಯಕ್ಷ ಪ್ರಭಾಕರ್ ,ಕಾರ್ಯದರ್ಶಿ ಸುನಿಲ್ ಎಸ್ ಕೆ ,ಪ್ರೇಮ್, ಸಂತೋಷ್ ,ವಿಜಯ್, ಶಿವರಾಜ್ ,ಸಣ್ಣಯ್ಯ ಹಾಜರಿದ್ದರು.

ಅಜಾತ ಶತ್ರು ಸಂಸದ ಶ್ರೀನಿವಾಸ ಪ್ರಸಾದ್

ಮೈಸೂರು: ಸುಧೀರ್ಘ ಐವತ್ತು ವರ್ಷದ ರಾಜಕೀಯದಲ್ಲಿ ಸಿದ್ಧಾಂತಗಳಿಗೆ ಬದ್ಧರಾಗಿದ್ದು, ಅಜಾತ ಶತ್ರುವಾಗಿ ಬೆಳೆದ ತಮ್ಮ ನೆಚ್ಚಿನ ನಾಯಕನನ್ನು ಕೊನೆಯ ಬಾರಿ ಕಣ್ತುಂಬಿಕೊಳ್ಳಲು ನೂರಾರು ಜನ ವಿ.ಶ್ರೀನಿವಾಸ ಪ್ರಸಾದ್ ಮನೆಗೆ ಆಗಮಿಸಿದರು. ಪಾರ್ಥಿವ ಶರೀರವನ್ನು ಕಂಡೊಡನೆ ಅವರ ಕಣ್ಣಾಲಿಗಳು ತೇವಗೊಳ್ಳುತ್ತಿದ್ದವು.
ಬೆಂಗಳೂರಿನ ಮಣಿಪಾಲ್ ಆಸ್ಪತ್ರೆಯಿಂದ ಶ್ರೀನಿವಾಸ್ ಪ್ರಸಾದ್ ಅವರ ಪಾರ್ಥಿವ ಶರೀರರವನ್ನು ಜಯಲಕ್ಷ್ಮೀಪುರಂನಲ್ಲಿರುವ ಅವರ 'ಭೀಮ ಸದನ' ಮನೆಗೆ ಕರೆತರಲಾಯಿತು. ಕುಟುಂಬ ಹಾಗೂ ಸಹೋದರಿಯರು ದುಃಖವು ಕಟ್ಟೆಯೊಡೆಯಿತು. ಅದಾಗಲೇ ಸುದ್ದಿ ತಿಳಿದ ಅನೇಕರು ಮನೆಯತ್ತ ಧಾವಿಸಿದರು. ನಗರ ಪೊಲೀಸ್ ಇಲಾಖೆಯು ತಕ್ಷಣ ಕಾರ್ಯಪ್ರವೃತ್ತರಾಗಿ ಭದ್ರತೆಯ ವ್ಯವಸ್ಥೆ ಮಾಡಿತು.
ಬೆಳಿಗ್ಗೆ 8ರ ಸುಮಾರಿಗೆ ಸಾರ್ವಜನಿಕರಿಗೆ ದರ್ಶನಕ್ಕೆ ಅವಕಾಶ ಮಾಡಿಕೊಡಲಾಯಿತು. ಜನ ಐದು ದಶಕಗಳಿಂದ ತಮ್ಮ ಪರ ಧ್ವನಿ ಎತ್ತಿದ ನಾಯಕನಿಗೆ ಮಾಲಾರ್ಪಣೆ ಮಾಡಿ ಕೊನೆಯ ಬಾರಿ ಆಶೀರ್ವಾದ ಪಡೆಯುತ್ತಿದ್ದ ದೃಶ್ಯಗಳು ಭಾವನಾತ್ಮಕವಾಗಿತ್ತು. 'ಅಣ್ಣಾ ನನ್ನನ್ನು ಬಿಟ್ಟು ತೆರಳಿದೆಯಲ್ಲಾ.. ನಿಮ್ಮ ಜೊತೆಯಾಗಿಯೇ ಇರುತ್ತಿದ್ದೆನಲ್ಲಾ' ಎಂದು ಮೃತ ದೇಹದ ಮುಂದೆ ವ್ಯಕ್ತಿಯೊಬ್ಬ ಮರುಗುತ್ತಿದ್ದರು. ಇದೇ ರೀತಿಯ ಅನೇಕ ಕಥೆಗಳು 'ಭೀಮ ಸದನ'ದ ಸುತ್ತ ಅವರ ಒಡನಾಡಿಗಳ ಮೂಲಕ ಮಾರ್ಧನಿಸುತ್ತಿತ್ತು. ಪಕ್ಷ ಬೇಧವಿಲ್ಲದೆ ಸೇರಿದ್ದ ರಾಜಕೀಯ ನಾಯಕರ ದಂಡು ಶ್ರೀನಿವಾಸ ಅವರ 'ಸ್ವಚ್ಛ ರಾಜಕಾರಣ'ಕ್ಕೆ ಹಿಡಿದ ಕೈಗನ್ನಡಿಯಾಗಿತ್ತು. ಮೈಸೂರು, ಚಾಮರಾಜನಗರ ಅಷ್ಟೇ ಅಲ್ಲದೆ ರಾಜ್ಯದ ವಿವಿಧ ಭಾಗದಿಂದ ಜನ ಆಗಮಿಸಿ ಅಂತಿಮ ದರ್ಶನ ಪಡೆದರು. ಮಧ್ಯಾಹ್ನ 1.30ರವರೆಗೆ ಮನೆಯಲ್ಲಿ ಅಂತಿಮ ದರ್ಶನಕ್ಕೆ ಅವಕಾಶ ಮಾಡಿಕೊಡಲಾಯಿತು. ಬಳಿಕ ಅಶೋಕಪುರಂನಲ್ಲಿರುವ ಎನ್‌ಟಿಎಂ ಶಾಲೆಯಲ್ಲಿ ಪಾರ್ಥಿವ ಶರೀರವನ್ನು ಇರಿಸಿ, ಸಾರ್ವಜನಿಕರಿಗೆ ಅಂತಿಮ ನಮನಕ್ಕೆ ಅವಕಾಶ ಕಲ್ಪಿಸಲಾಯಿತು. ವಿವಿಧ ಪಕ್ಷ, ಸಂಘಟನೆಯ ಮುಖಂಡರು ಆಗಮಿಸಿ ಅಂತಿಮ ನಮನ ಸಲ್ಲಿಸಿದರು. ಇಂದು ಮಧ್ಯಾಹ್ನದವರೆಗೂ ಅಂತಿಮ ನಮನ ಸಲ್ಲಿಸಲು ವ್ಯವಸ್ಥೆ ಮಾಡಲಾಗಿದೆ.

: ಕದಲದ ಹರ್ಷವರ್ಧನ್ ದಂಪತಿ

ಶ್ರೀನಿವಾಸ ಪ್ರಸಾದ್ ಅವರ ಅಳಿಯ ನಂಜನಗೂಡು ಕ್ಷೇತ್ರದ ಮಾಜಿ ಶಾಸಕ ಹರ್ಷವರ್ಧನ ಹಾಗೂ ಮಗಳು ಪ್ರತಿಮಾ ಪ್ರಸಾದ್ ಮೃತದೇಹದ ಬಳಿ ನಿಂತು ಭಾವುಕರಾದರು.

ನೆರಳು ಹಾಗೂ ನೀರಿನ ವ್ಯವಸ್ಥೆ

ಶ್ರೀನಿವಾಸ ಪ್ರಸಾದ

ಕಾಯಕಯೋಗಿ 30/04/2024 ಮಂಗಳವಾರ



ರೇಷ್ಮೆ ಸಾಕಾಣಿಕೆ ಕೇಂದ್ರ ಪುನರ್ ನಿರ್ಮಿಸಿ

ಗುಂಡ್ಲುಪೇಟೆ: ತಾಲೂಕಿನ ಶ್ಯಾನಾಡ್ರಹಳ್ಳಿ ಗ್ರಾಮದ ಮುಖ್ಯ ರಸ್ತೆಯಲ್ಲಿ ಕಳೆದ 20 ವರ್ಷಗಳ ಹಿಂದೆ ರೇಷ್ಮೆ ಸಾಕಾಣಿಕೆ ಕೇಂದ್ರವೊಂದು ಇತ್ತು. ಅದು ಈಗ ನಿರುಪಯುಕ್ತವಾಗಿ ಬಿದ್ದಿದೆ ಎನ್ನುತ್ತಾರೆ ಗ್ರಾಮಸ್ಥರು.

ಇದರಿಂದ ಕಟ್ಟಡದ ಸುತ್ತಲೂ ಗಿಡಗಂಟಿಗಳು ಹಾಗೂ ಬಳ್ಳಿಗಳು ಹಬ್ಬಿನಿಂತಿದೆ. ಈ ಕಟ್ಟಡದಲ್ಲಿ ಇಲಾಖೆಯು ಕಾರ್ಯನಿರ್ವಹಿಸುತ್ತಿಲ್ಲ. ಅದರ ಪರಿಣಾಮವಾಗಿ ಬಾಗಿಲುಗಳು ಮತ್ತು ಕಿಟಕಿಗಳು ಸೇರಿದಂತೆ ಕಟ್ಟಡ ಸಂಪೂರ್ಣವಾಗಿ ಶಿಥಿಲಗೊಂಡಿವೆ. ಕಟ್ಟಡವನ್ನು ಅವೈಜ್ಞಾನಿಕವಾಗಿ ಹಳ್ಳದಲ್ಲಿ ನಿರ್ಮಾಣ ಮಾಡಿರುವ ಉದ್ದೇಶದಿಂದ ಮಳೆ ಬಂದ ಸಂದರ್ಭದಲ್ಲಿ ಕೊಳಚೆ ಹಾಗೂ ಚರಂಡಿ ನೀರು ಕಟ್ಟಡದ ಆಸುಪಾಸಿನಲ್ಲಿ ಹರಿಯುತ್ತಿದೆ.

ಇದರಿಂದ ಕಟ್ಟಡವನ್ನು ಬೇರೆ ಉದ್ದೇಶಕ್ಕೆ ಬಳಸಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಲಕ್ಷಾಂತರ ರೂ. ಖರ್ಚು ಮಾಡಿ ನಿರ್ಮಾಣ ಮಾಡಿದ್ದ ಕಟ್ಟಡ ಇದೀಗ ಪಾಳು ಬಿದ್ದಿರುವ ಹಿನ್ನೆಲೆ ಗ್ರಾಮಸ್ಥರು ಅಸಮಾಧಾನ ವ್ಯಕ್ತಪಡಿಸಿದ್ದು, ಕಟ್ಟಡವನ್ನು ಇತರೆ ಉದ್ದೇಶಕ್ಕೆ ಬಳಕೆ ಮಾಡಿಕೊಳ್ಳುವಂತೆ ಸಲಹೆ ನೀಡಿದ್ದಾರೆ. ಪಂಚಾಯಿತಿಗಳ ಅಭಿವೃದ್ಧಿಗೆ ಸರ್ಕಾರ ದಿಂದ ಅಪಾರ ಪ್ರಮಾಣದ ಅನುದಾನ ನೀಡಲಾಗುತ್ತಿದ್ದು, ಹದಗೆಟ್ಟಿರುವ ಕಾರಣ ಇಲ್ಲಿ ಯಾವ ಕಾರ್ಯಗಳು ನಡೆಯುತ್ತಿಲ್ಲ ಎಂದು ಈ ಭಾಗದ ಸಾರ್ವಜನಿಕರು ತಿಳಿಸಿದರು. ಈ ಕಟ್ಟಡದ ಬಗ್ಗೆ ಸಂಬಂಧ ಪಟ್ಟ ಇಲಾಖೆ ಸಂಪೂರ್ಣ ನಿರ್ಲಕ್ಷ್ಯ ವಹಿಸಿದೆ ಎಂದು ಸ್ಥಳೀಯರು ಆರೋಪಿಸಿದರು. ಕಳೆದ 20 ವರ್ಷಗಳಿಂದ ಈ ಕಟ್ಟಡದ ದುರಸ್ತಿ ಬಗ್ಗೆ ಯಾರೂ ಕಾಳಜಿ ವಹಿಸಿಲ್ಲ ಎಂದರು.

ಎರಡು ಜಿಲ್ಲೆಯಲ್ಲಿ ಸಾರ್ವಜನಿಕ ರಜೆ ಘೋಷಣೆ

ಚಾಮರಾಜನಗರ: ಚಾಮರಾಜನಗರ ಸಂಸದ ವಿ.ಶ್ರೀನಿವಾಸಪ್ರಸಾದ್ ನಿಧನ ಹಿನ್ನೆಲೆ ಮೈಸೂರು, ಚಾಮರಾಜನಗರದ ಎಲ್ಲಾ ಸರ್ಕಾರಿ ಕಚೇರಿಗಳು, ಶಾಲಾ–ಕಾಲೇಜಿಗೆ ರಜೆ ಘೋಷಣೆ ಮಾಡಿ ಸರ್ಕಾರ ಆದೇಶಿಸಿದೆ. ಸೋಮವಾರ ಸಂಜೆ ಈ ಆದೇಶ ಹೊರಬಿದ್ದಿದ್ದು ಏ.30 ರ ಮಂಗಳವಾರದಂದು ಸಾರ್ವಜನಿಕ ರಜೆ ಘೋಷಣೆ ಮಾಡಲಾಗಿದೆ. ಪೂರ್ವ ನಿಗದಿಯಾಗಿದ್ದ ಪರೀಕ್ಷೆಗಳನ್ನು ಹೊರತುಪಡಿಸಿ ಎಲ್ಲಾ ಶಾಲಾ–ಕಾಲೇಜಿಗೂ, ಅನುದಾನ ಪಡೆಯುವ ಎಲ್ಲಾ ವಿದ್ಯಾಸಂಸ್ಥೆಗಳಿಗೂ ರಜೆ ಘೋಷಣೆ ಮಾಡಲಾಗಿದೆ. ಮೃತರ ಅಂತ್ಯಕ್ರಿಯೆಯನ್ನು ಸಕಲ ಸರ್ಕಾರಿ ಗೌರವದೊಂದಿಗೆ ನೆರವೇರಿಸಬೇಕೆಂದು ಕರ್ನಾಟಕ ಸರ್ಕಾರದ ಅಧೀನ ಕಾರ್ಯದರ್ಶಿ ವಿಜಯ್ ಕುಮಾರ್ ಆದೇಶಿಸಿದ್ದಾರೆ.



ದಿ.ಶ್ರೀನಿವಾಸ್ ಪ್ರಸಾದ್‌ಗೆ ಶ್ರದ್ಧಾಂಜಲಿ

ಹನೂರು: ಹಿರಿಯ ರಾಜಕಾರಣಿ ಚಾಮರಾಜನಗರ ಲೋಕಸಭಾ ಕ್ಷೇತ್ರದ ಸಂಸದ ವಿ. ಶ್ರೀನಿವಾಸ್ ಪ್ರಸಾದ್ ರವರು ನಿಧನರಾದ ಹಿನ್ನೆಲೆಯಲ್ಲಿ ಅಭಿಮಾನಿಗಳು ಹಾಗೂ ಬೆಂಬಲಿಗರಿಂದ ಪಟ್ಟಣದಲ್ಲಿ ಇಂದು ಶ್ರದ್ಧಾಂಜಲಿ ಸಲ್ಲಿಸಲಾಯಿತು. ಪಟ್ಟಣದ ಡಾ. ಬಿಆರ್ ಅಂಬೇಡ್ಕರ್ ಪ್ರತಿಮೆ ಆವರಣದಲ್ಲಿ ಶ್ರದ್ಧಾಂಜಲಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಈ ವೇಳೆ ಮಾತನಾಡಿದ ಮುಖಂಡರು ಚಾಮರಾಜನಗರ ಲೋಕಸಭಾ ಮೀಸಲು ಕ್ಷೇತ್ರದಿಂದ ಆರು ಬಾರಿ ಸಂಸದರಾಗಿ ಹಾಗೂ ಕೇಂದ್ರ ಮತ್ತು ರಾಜ್ಯ ಸರ್ಕಾರದ ಸಚಿವರಾಗಿ ಸೇವೆ ಸಲ್ಲಿಸಿರುವ ಇವರು ನಮ್ಮ ಜಿಲ್ಲೆಯ ಅಭಿವೃದ್ಧಿಗೆ ಮತ್ತು ದಲಿತ ಸಮುದಾಯದ ಉನ್ನತಿಗಾಗಿ ಹಲವು ಕೆಲಸ ಕಾರ್ಯಗಳನ್ನು ಮಾಡಿದ್ದಾರೆ. ಚಾಮರಾಜನಗರ ಜಿಲ್ಲೆಯಲ್ಲಿ ದಲಿತರಿಗೆ ಯಾವುದೇ ಸಂದರ್ಭದಲ್ಲಿ ಅನ್ಯಾಯವಾದರೆ ಅಲ್ಲಿ ಅವರು ಧ್ವನಿ ಎತ್ತುತ್ತಿದ್ದರು ಮತ್ತು ನ್ಯಾಯ ದೊರಕಿಸಿಕೊಡುತ್ತಿದ್ದರು. ಇಂತಹ ವ್ಯಕ್ತಿಯನ್ನು ಕಳೆದುಕೊಂಡ ದಲಿತ ಸಮುದಾಯ ಅನಾಥವಾಗಿದೆ ಎಂದರು.

ಈ ಸಂದರ್ಭದಲ್ಲಿ ಯಜಮಾನರುಗಳಾದ ನಿಂಗರಾಜು, ಚಿಕ್ಕಣ್ಣ, ಸಿದ್ದರಾಜು, ಪಟ್ಟಣ ಪಂಚಾಯತಿ ಸದಸ್ಯ ಸಂಪತ್ ಕುಮಾರ್, ದಲಿತ ಮುಖಂಡರಾದ ಸಿದ್ದರಾಜು, ರವೀಂದ್ರ, ನಂಜಪ್ಪ, ಪುಟ್ಟರಾಜು, ಕಿರಣ್, ರಾಜೇಶ್, ಅಶೋಕ, ಮುಂತಾದವರು ಉಪಸ್ಥಿತರಿದ್ದರು.

ಮಲೆ ಮಹದೇಶ್ವರ ಬೆಟ್ಟದಲ್ಲಿ ವಿಶೇಷ ಪೂಜೆ

ಚಾಮರಾಜನಗರ: ಹನೂರು ತಾಲೂಕಿನ ಶ್ರೀ ಕ್ಷೇತ್ರ ಮಲೆ ಮಹದೇಶ್ವರ ಬೆಟ್ಟದಲ್ಲಿ ಸೋಮವಾರ ವಿಶೇಷ ಪೂಜೆ ಉತ್ಸವಾದಿಗಳು ಸಂಪ್ರದಾಯದಂತೆ ಜರುಗಿದವು. ಸೋಮವಾರ ಮುಂಜಾನೆಯಿಂದಲೇ ಸ್ವಾಮಿಗೆ ಎಳನೀರಿನ ಅಭಿಷೇಕ ಹಾಲು ಪಂಚಾಮೃತ ಅಭಿಷೇಕ ನೆರವೇರಿತು. ನೈವೇದ್ಯ ಅರ್ಪಿಸಿದ ಬಳಿಕ ಮಹಾಮಂಗಳಾರತಿ ಮಾಡಲಾಯಿತು.

ಏಪ್ರಿಲ್ 26ರಂದು ಚುನಾವಣೆ ನಾಲ್ಕನೇ ಶನಿವಾರ ಸೇರಿದಂತೆ ಭಾನುವಾರ ವಾರಂತ್ಯದ ರಜೆ ಇದ್ದ ಹಿನ್ನೆಲೆ ಶ್ರೀ ಕ್ಷೇತ್ರಕ್ಕೆ ಸಾವಿರಾರು ಜನರು ಭೇಟಿ ನೀಡಿ ಮಹದೇಶ್ವರ ದರ್ಶನ ಪಡೆದರು. ಚಿನ್ನದ ರಥೋತ್ಸವ ಬೆಳ್ಳಿ ರಥೋತ್ಸವ ಬಸವ ವಾಹನ ಹುಲಿ ವಾಹನ ರುದ್ರಾಕ್ಷಿ ಮಂಟಪದ ಸೇವೆಗಳನ್ನು ಮಾಡುವ ಮೂಲಕ ತಮ್ಮ ಹರಕೆಯನ್ನು ಸಮರ್ಪಿಸಿದರು.

ರಜೆ ಹಿನ್ನೆಲೆ ಬೆಂಗಳೂರು, ರಾಮನಗರ, ಕನಕಪುರ, ಮೈಸೂರು, ಮಂಡ್ಯ, ಬೆಂಗಳೂರು ಗ್ರಾಮಾಂತರ, ಚಾಮರಾಜನಗರ, ನಂಜನಗೂಡು ತುಮಕೂರು ಕೋಲಾರ ಸೇರಿದಂತೆ ತಮಿಳುನಾಡು ರಾಜ್ಯದ ವಿವಿಧ ಗ್ರಾಮಗಳಿಂದ ಭಕ್ತಾದಿಗಳು ಆಗಮಿಸಿ ದೇವರ ದರ್ಶನ ಪಡೆದರು.

ಇರಲ್ಲದೆ 60 ವರ್ಷ ಮೇಲ್ಪಟ್ಟ ಭಕ್ತಾದಿಗಳಿಗೆ ರಾಜಗೋಪುರದ ಮುಖ್ಯ ದ್ವಾರದಲ್ಲಿ ನೇರದರ್ಶನಕ್ಕೆ ಅವಕಾಶ ಕಲ್ಪಿಸಲಾಗಿತ್ತು.

ಶ್ರೀ ಕ್ಷೇತ್ರಕ್ಕೆ ಆಗಮಿಸಿದ್ದ ಭಕ್ತಾದಿಗಳಿಗೆ ಶ್ರೀ ಮಲೆ ಮಹದೇಶ್ವರ ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ಕುಡಿಯುವ ನೀರು, ನೆರಳಿನ ವ್ಯವಸ್ಥೆ, ಸರತಿಸಾಲಿನ ವ್ಯವಸ್ಥೆ ಕಲ್ಪಿಸಲಾಗಿತ್ತು.

ಭಕ್ತಾದಿಗಳಿಗೆ ವಿವಿಧ ರೀತಿಯ ಪ್ರಸಾದ: ಸೋಮವಾರ ಶ್ರೀ ಕ್ಷೇತ್ರಕ್ಕೆ ಆಗಮಿಸಿದ್ದ ಭಕ್ತಾದಿಗಳಿಗೆ ಬಿಸಿಲಿನ ತಾಪಮಾನ ಹೆಚ್ಚಳವಾಗಿರುವುದರಿಂದ ದಾಸೋಹ ಭವನದಲ್ಲಿ ಭಕ್ತಾದಿಗಳಿಗೆ ಮೊಸರನ್ನ, ಉಪ್ಪಿಟ್ಟು ಪುಳಿಯೋಗರೆ ಕೇಸರಿ ಬಾತ್, ಕಳ್ಳೆ ಹುಳಿ ಸೇರಿದಂತೆ ಇನ್ನಿತರ ವಿವಿಧ ಬಗೆಯ ಪ್ರಸಾದ ವಿತರಣೆ ಮಾಡಲಾಯಿತು.



ನಾಡ ನಡುವಿನಿಂದ ಸಿಡಿದ ನೋವಿನ ಕೂಗೆ....!

ಶ್ರೀನಿವಾಸ್ ಪ್ರಸಾದ್ ಎಂಬುದು ಒಂದು "ಸೋಶಿಯಲ್ ವೈಬ್ರೇಶನ್"

ನಾವು ಸಾಲು ಸಾಲು ದೀಪಗಳನ್ನು ಸುಡುವ ಸಂಕಟದ ಕಾಲದಲ್ಲಿ ಬದುಕುತ್ತಿದ್ದೇವೆ...

ಈ ಕೈಗಳು ಅತ್ಯಂತ ಸಂಕಟದ ಸಾಲುಗಳನ್ನು ಬರೆಯುತ್ತೇವೆ. 'ನಿಮಗೆ ಭಾವಪೂರ್ಣ ಶ್ರದ್ಧಾಂಜಲಿ' ಎಂದು. ಈ ಕಂಗಳು ತುಂಬಿ ಭಾರವಾದ ಹನಿಗಳು ಈ ನೆಲಕ್ಕೆ ಅಪ್ಪಳಿಸುತ್ತಿವೆ. "ನೀವಿನ್ನು ಸನಿಹದಲ್ಲಿ ಇಲ್ಲ ಎಂದು". ಆದರೆ ಈ ಹೃದಯ ನಿಮ್ಮ ಮಾತುಗಳ ಸ್ಫೂರ್ತಿಯಲ್ಲಿ ಸ್ತಬ್ಧವಾಗಿದೆ.

ಇಂದು ಈ ಸಮಾಜವೂ ಕೂಡ ಸ್ತಬ್ಧವಾಗಿದೆ. ನನಗೆ ಒಂದು ಹೃದಯ ಇರುವ ಹಾಗೆ, ಈ ಸಮಾಜಕ್ಕೂ ಒಂದು ಹೃದಯವಿದೆ. ಅದು ಕೂಡಾ "ಕಂಪಿಸುತ್ತಿದೆ" ಅರ್ಥಾತ್ "ವೈಬ್ರೇಶನ್" ಅದು ಗಟ್ಟಿಯಾದ ಧ್ವನಿಯಿಂದ ಮಾತ್ರ ಕಂಪಿಸುತ್ತದೆ. ನೀವು ಅಂತಹ ಸಾಮಾಜಿಕ ಕಂಪನಗಳ ಮೂಲ ಧ್ವನಿಯಾಗಿದ್ದವರು. ನಿಮ್ಮ ಧ್ವನಿಗೆ ಈ ಸಮಾಜ ಅನೇಕ ಬಾರಿ ಕಂಪಿಸಿದೆ. ಅಂತಹ ಕಂಪನಗಳು ಶತಕಗಳಲ್ಲೊಮ್ಮೆ ಸಂಭವಿಸುತ್ತದೆ. ಅಂತಹ ಕಂಪನಗಳ ಕಾರಣ ನಿಮ್ಮ ಅಗಲಿಕೆಯನ್ನು ಸಹಿಸುವುದು ತುಂಬಾ ಕಷ್ಟಕರವಾಗಿದೆ.

ಅತ್ಯಂತ ಕಟ್ಟ ಕಡೆಯ ಗ್ರಾಮದಲ್ಲಿ, ನಿಮ್ಮ ಹೆಸರನ್ನು ಹೇಳಿಕೊಂಡು ಧೈರ್ಯವಾಗಿ ಬದುಕುತ್ತಿದ್ದ ಬಡ ಶೋಷಿತನಿಗೆ ನಿಮ್ಮ ಸಾವನ್ನು ಸಹಿಸಿಕೊಳ್ಳುವುದು ಕಡುಕಷ್ಟ.

"ನಾಡ ನಡುವಿನಿಂದ ಸಿಡಿದ ನೋವಿನ ಕೂಗೆ"ಎಂಬ ಸಿದ್ದಲಿಂಗಯ್ಯನವರ ಸಾಲುಗಳನ್ನು ನಾನು ಇಲ್ಲಿ ಬಳಸಿದ್ದೇನೆ. ಏಕೆಗೊತ್ತಾ? ಆ ಸಾಲಿನ ಅಲೆಗಳು ಮೂಡುತ್ತಿದ್ದಂತೆ, ಬಂಡೆಯಂತಹ ನಿಮ್ಮ ದೇಹ ಹೂವಿನಂತಾಗಿ ಬಿಕ್ಕಿ ಬಿಕ್ಕಿ ಅಳುತ್ತಿತ್ತು. ನೂರಾರು ಸಾವಿರಾರು ಜನರ ಮುಂದೆ. ನಿಮ್ಮ ಕಣ್ಣುಗಳು ತುಂಬಿ ಬರುತ್ತಿದ್ದವು. ಅಂಬೇಡ್ಕರ್ ಅವರು ಅತ್ಯಂತ ಆಳವಾಗಿ ನಿಮ್ಮೊಳಗೆ ಇಳಿದು, ನೋವಿನ ಬಿಂದುಗಳಾಗಿ ಹೊರಬಂದ ಕಥೆಯದು. ಪದೇ ಪದೇ ನೀವು ಹೇಳಿದ್ದು, "ಅಂಬೇಡ್ಕರ್ ನೋವಿನ ಜ್ವಾಲೆಗಳಿಂದ ಎದ್ದು ಬಂದವರು. ನಮ್ಮೊಳಗಿನ ಅಸ್ಪೃಶ್ಯತೆಯ ನೋವಿದೆಯಲ್ಲಾ... ಅದನ್ನು ಯಾರಿಂದಲೂ ಸಹಿಸಲು ಸಾಧ್ಯವೇ ಇಲ್ಲ. ಡಾ. ಅಂಬೇಡ್ಕರ್ ಬೌದ್ಧಯಾತ್ರೆ "ಇಟ್ ಇಸ್ ನಾಟ್ ಎ ಕನ್ವರ್ಷನ್ ಇಟ್ ಇಸ್ ಎ ರಿವರ್ಶನ್". ನಮ್ಮೆಲ್ಲರ ಅಂತಿಮ ವಿಮೋಚಕ ಅವರು." ೧ ಖಖಿಡಿಣಣಚಿಟ ಖಜಚಿಜಜಡಿ ಎಂಬ ಪದಗಳು ನಿಮ್ಮ ಎದೆಯಿಂದ "ಬುಲೆಟ್ ವೇಗ" ದಲ್ಲಿ ಈ ಸಮಾಜವನ್ನು ಅಪ್ಪಳಿಸುತ್ತಿದ್ದವು. ನಿಮ್ಮ ಮಾತು ತೀಕ್ಷ್ಣವಾಗಿದ್ದರೂ, ಕಣ್ಣುಗಳು ಮಾತ್ರ ತುಂಬಿ ಬರುತ್ತಿದ್ದವು. ಹಾಗಾಗಿ ಈ ಗೀತೆ ನಮಗೆ ಸ್ಫೂರ್ತಿಯಾಗಿದೆ. ಇದು ನಮ್ಮೆಲ್ಲರ ಸ್ಫೂರ್ತಿಯ ಗೀತೆಯಾಗಬೇಕು.ಅಂಬೇಡ್ಕರ್ ಅವರು ಅವಮಾನಿತರನ್ನು ಮೇಲೆತ್ತಲು ಏಕಾಂಗಿಯಾಗಿ ಹೋರಾಟ ಮಾಡಿದ ಎಲ್ಲ ಸ್ಫೂರ್ತಿಯ ಕ್ಷಣಗಳನ್ನು ನೆನೆನೆನೆದು ಹೊರ ಬಂದ ಕಣ್ಣ ಹನಿಗಳು ಅವು ಎಂಬುದು ಅರ್ಥವಾಯಿತು.

"ನಾನು ಮಲಗಿರುವ ಸಿಂಹದ ಜೊತೆ ಭೇಟಿಯಾಡುವವನಲ್ಲ, ಅದನ್ನು ಎಬ್ಬಿಸಿ ಬೇಟೆಯಾಡುವವನು. ಎಂಬ ಎದೆಗಾರಿಕೆಯ ವ್ಯಕ್ತಿತ್ವವೊಂದು, ಕರಗಿ ನೀರಾಗುತ್ತಿದ್ದ ಭಾವಗಳ ನಡುವೆಯೇ ನಿಮ್ಮ ಬದುಕು ಗೌಪ್ಯವಾಗಿತ್ತು. ಈ ಶೋಷಣೆಯನ್ನು ಸಹಿಸದ, ಈ ಜನರಿಗೆ ಸ್ವಾಭಿಮಾನವನ್ನು ಅರ್ಥ ಮಾಡಿಸಲಾರದೆ, ಅತ್ಯಂತ ಅಸಹಾಯಕತೆಯ ಪರಿಸ್ಥಿತಿ ಅದು. "ಗುಂಡಿಗೆ" ಇದ್ದವನು ಸಿಡಿಯುತ್ತಾನೆ. "ತಾಯ್ತನ" ಇದ್ದವನು ಮರಗುತ್ತಾನೆ. ಈ ಎರಡರ ಗಣೀಕರಿಸಿದ್ದ ಬದುಕೇ ನೀವಾಗಿದ್ದಿರಿ.



ಶ್ರೀನಿವಾಸ್ ಪ್ರಸಾದ್ "ಏಕೋ ಉಪಾಧ್ಯಾಯ ಶಾಲೆಯ ಮುಖ್ಯೋಪಾಧ್ಯಾಯ" ಎಂಬ ರವಿ ಬೆಳಗೆರೆಯವರ ವ್ಯಾಖ್ಯಾನ ಅತ್ಯಂತ ನಿಖರವಾದದ್ದು. ಸಾಮಾಜಿಕ ಸಿಟ್ಟಿಗೆ ತನ್ನದೇ ಆದ ಪಾಳ್ಯಪಟ್ಟವನ್ನು ನಿರ್ಮಿಸಿಕೊಂಡು, ಅಖಾಡದಲ್ಲಿ "ಡೆಮಾಕ್ರೆಟಿಕ್" ಮೌಲ್ಯಗಳನ್ನು ಬೋಧಿಸುತ್ತಿದ್ದ, ಪ್ರಜಾಪ್ರಭುತ್ವವಾದಿ. ಪ್ರಭುತ್ವದ ವಿರೋಧಿ. ಎಂದೂ, ಯಾರಿಗೂ, ಶರಣಾಗದ ನಿಜಶರಣರ ಪಥ ನಿಮ್ಮ ಬದುಕು....

ಶ್ರೀನಿವಾಸ್ ಪ್ರಸಾದ್ ಅಧಿಕಾರಕ್ಕಾಗಿ ಎಂದೂ, ಯಾರ ಮುಂದೆಯೂ, ತನ್ನ ಎದೆಯನ್ನು ಭಾಗಿಸಿಲ್ಲ. ಯಾರ ಪಾದಗಳನ್ನು ಸ್ಪರ್ಶಿಸಿಲ್ಲ. ಯಾರ ಮನೆ ಬಾಗಿಲನ್ನು ಕಾಯ್ದಿಲ್ಲ ಎಂಬ ಮಾತು ಜನಮಾನಸದಲ್ಲಿ ಅತ್ಯಂತ ಜೀವಿತ. ಈ ನಡವಳಿಕೆಯೇ ನಿಮ್ಮನ್ನು ಜನಮಾನಸದಲ್ಲಿ ಅತ್ಯಂತ ಮೇರು ಶಿಖರದಲ್ಲಿರಿಸಿದೆ. ಶತಶತಮಾನಗಳಿಂದ ಅವಮಾನ ಕ್ಕೊಳಗಾದ ಜನ ಎಂದೂ ಇತರರು ಮುಂದೆ "ಬಾಗುವುದನ್ನು" ಸಹಿಸುವುದಿಲ್ಲ. ಹಸಿವು ಮತ್ತು ಅವಮಾನಗಳ ಆಯ್ಕೆಯಲ್ಲಿ ಅವರು ಹಸಿವನ್ನು ಸಹಿಸಿಕೊಂಡು ಬದುಕುತ್ತಾರೆ ಆದರೆ ಅವಮಾನವನಲ್ಲ. ನೀವು ಅವಮಾನವನ್ನು ಧಿಕ್ಕರಿಸಿದವರ ಪ್ರತಿನಿಧಿ. ನೀವು ಶತಶತಮಾನಗಳಿಂದ ಅವಮಾನ ಕೊಳಗಾದವರ ಪರ. ಶೋಷಣೆಗೊಳಗಾದವರೂ ಕೂಡಾ ಸ್ವಾಭಿಮಾನಿಯಾಗಿ ಬದುಕಬಲ್ಲರೆಂಬ ಬದುಕಿಗೆ, ನೀವು ಬಹುದೊಡ್ಡ ನಿದರ್ಶನ

ನೀವು ಒಬ್ಬ ಫುಟ್ಬಾಲ್ ಪ್ಲೇಯರ್. ಗೋಲ್ ಗಾಗಿ ಕ್ರೀಡಾಂಗಣದ ತುಂಬಾ ಹೋರಾಡಿದವರು. ಗೋಲ್ ಎಂಬುದು ಯಾವಾಗಲೂ ಹೆಜ್ಜೆಗಳ ದಿಕ್ಕಿನಲ್ಲಿ ಇರುತ್ತದೆ. ಒಮ್ಮೊಮ್ಮೆ ಇಲ್ಲಿ ಧಿಕ್ಕರಿಸಬೇಕು. ಒಮ್ಮೊಮ್ಮೆ ಒಡೆಯಬೇಕು. ನೀವು ರಾಜಕೀಯ ಕ್ರೀಡಾಂಗಣದ "ಪೆನಾಲ್ಟಿ ಕಾರ್ನರ್ ಕಿಕ್ಕ್ ರ್"

ಜಿ.ಕೆ. ಗೋವಿಂದ ರಾವ್ ನಿಮ್ಮನ್ನು "ಪೊಲಿಟಿಕಲ್ ಪ್ರೊಫೆಸರ್" ಎಂದು ಕರೆದಿದ್ದು ಈಗ ಜನಜನಿತ. ನೀವು ಎಲ್ಲಾ ಸಮುದಾಯಗಳ ನಡುವಿನ ಪ್ರೀತಿಯ"ರಾಜಕೀಯಪ್ರಾಧ್ಯಾಪಕ"ಸಣ್ಣಸಣ್ಣಸಮುದಾಯಗಳಿಂದಿಡಿದು, ಅತಿ ದೊಡ್ಡ ಸಮುದಾಯಗಳಲ್ಲಿಯೂ ನಂಬಿಕೆ ವಿಶ್ವಾಸಗಳಿಗೆ ಅರ್ಹರಾಗಿದವರು. ನೀವು ಎಲ್ಲಾ ಸಮುದಾಯಗಳ "ಸೌಹಾರ್ದ ಸ್ಪಂದನ". ಸಮಸ್ತ ಸಮುದಾಯಗಳ ಪ್ರೇಮವಿಲ್ಲದೆ ಸುಧೀರ್ಘ ರಾಜಕಾರಣದಲ್ಲಿ ನಿರಂತರತೆಯನ್ನು ಕಾಯ್ದುಕೊಳ್ಳುವುದು ಕಷ್ಟ. ಇಂದು ಎಲ್ಲಾ ಜನ ಸಮುದಾಯಗಳ ಹೃದಯಗಳೂ ಕೂಡಾ ಭಾರವಾಗಿವೆ.

ಕರ್ನಾಟಕ ಕಂಡ "ಹಿರಿಯ ಮುತ್ಸದ್ದಿ", "ಕಳಂಕ ರಹಿತ", "ಬಿಳಿ ಬಿಂದು", "ವೈಟ್ ಕಾಲರ್", ಎಂದು ಎಲ್ಲ ಸಮುದಾಯಗಳು ಒಕ್ಕೊರಲಿನಿಂದ ನುಡಿಯುವಂತಹ, ನಾಯಕನನ್ನು ಶೋಷಿತ ಸಮುದಾಯಗಳು ಈ ಸಮಾಜಕ್ಕೆ ನೀಡಿದ ಈ ಕಾಲಘಟ್ಟದ ಅತ್ಯಂತ ಕೊನೆಯ ಕುಡಿ ನೀವು.

ಬಲು ಎತ್ತರ, ನಿಖರ, ನೇರ, ನಿಷ್ಠೂರ, ಎದೆಗಾರಿಕೆ, ಮಾತೃತ್ವ, ಇದು ನಿಮ್ಮ ಜೀವನ ಮಾರ್ಗ. ಬುದ್ಧ – ಬಸವ– ಅಂಬೇಡ್ಕರ್ ನಿಮ್ಮ ಸೈದ್ಧಾಂತಿಕ ಮಾರ್ಗ. ಸಂವಿಧಾನ ಎಂಬುದು ನಿಮ್ಮ ಸಾಮಾಜಿಕ ಮಾರ್ಗ. ಧೀಮಂತ ನಡಿಗೆ, ಉರಿವ ಕಂಗಳು, ಸಿಡಿಲಿನಂತಹ ಧ್ವನಿ, ಎದೆಯ ಕಾರುಣ್ಯಗಳ ಮಿಶ್ರಣ ನೀವು. "ಜಠಣ ಚಿಡಿಜ ಖಠಛಿಖಿಚಿಟ ಚಿಟಿಜಿ ಕಠಟಿಣಖಿಚಿಟ ಜಿಠಜಜಟಿಛಿಜ"

(ಸೋಶಿಯಲ್ ಅಂಡ್ ಪೊಲಿಟಿಕಲ್ ಎವಿಡಿಯನ್ಸ್)

ಸಂವಿಧಾನ ಬದಲಾಯಿಸುವುದಕ್ಕೆ ಅದು "ಮಗ್ಗಿ ಪುಸ್ತಕ" ಅಲ್ಲಾ, ಎಂಬ ಸಿಡಿಲು ಬಡಿಯಿತೆಂದರೆ, ಅದು ಶ್ರೀನಿವಾಸ್ ಪ್ರಸಾದ್ ರವರ ಧ್ವನಿ ಎಂಬುದು ಕರೆ. ಅಲ್ಲಿಗೆ ಎಲ್ಲವೂ ನಿಶಬ್ದ.

ಈ ಪೀಳಿಗೆಯ ಕಿವಿಗೆ ಸ್ವಾಭಿಮಾನ ಎಂಬ ಪದ ಬಿದ್ದಾಕ್ಷಣ, ಪ್ರಸಾದ್ ಎಂಬ ವ್ಯಕ್ತಿತ್ವ ನಿಮ್ಮ ಮುಂದೆ ಬಂದು ನಿಲ್ಲುವುದು ಖಂಡಿತ. ಶ್ರೀನಿವಾಸ್ ಪ್ರಸಾದ್ ಮತ್ತು ಸ್ವಾಭಿಮಾನ ಎಂಬ ಪದಗಳನ್ನು ಎಂದೂ ಕೂಡ ಬೇರ್ಪಡಿಸಲಾಗದು. ಪ್ರಸಾದ್ ರವರನ್ನು ರಾಜಕೀಯ ಕಾರಣಗಳಿಗಾಗಿ ದೂರುವ ಹೃದಯಗಳಿಗೂ ಕೂಡಾ, ಈ ಸಾವು ಅಘಾತ ತಂದಿರುತ್ತದೆ. ನಾಡಿನ ಪ್ರತಿ ಮನೆಯಲ್ಲಿ ಅವರ ಸಾವಿನ ವಿಚಾರಗಳು ರಿಂಗಣಿಸುತ್ತಿವೆ. ಸಮಾಜ ನಿಮ್ಮ ಹೋರಾಟದ ಹಾದಿಯನ್ನು ಎಂದೆಂದಿಗೂ ಪ್ರೀತಿಸುತ್ತದೆ. ನಿಮ್ಮಂತೆ ನಿಮ್ಮನ್ನು ನೋಡಿ ಗಡ್ಡ ಬಿಟ್ಟ ಗಡ್ಡದಾರಿಗಳು ಇಂದು ಅತಿ ಮೌನದಲ್ಲಿ ದುಕ್ಕಿಸುತ್ತಿದ್ದಾರೆ.

ಈ ಕೈಗಳು ಕಳೆದ 20 ತಿಂಗಳಲ್ಲಿ, ಈ ಸಮಾಜದ ಸಾಲು ಸಾಲು ದೀಪಗಳನ್ನು ಶ್ರದ್ಧಾಂಜಲಿಯ ಹೆಸರಿನಲ್ಲಿ ಸುಟ್ಟಿವೆ. ಈ ಸಮೂಹಕ್ಕೆ ಡಾ.ಸಿದ್ದಲಿಂಗಯ್ಯ, ಮಂಟೆಲಿಂಗಯ್ಯ, ಧ್ರುವನಾರಾಯಣ್ ರವರ, ಕೆ ಶಿವರಾಂ ರವರ, ಸಾವು ದೊಡ್ಡ ಆಘಾತವನ್ನು ನೀಡಿವೆ. ಮತ್ತೆ ನಿಮ್ಮ ಸಾವು ಮರ್ಮಘಾತವನ್ನು ನೀಡಿದೆ. ಒಂದೇ ಮನೆಯ ದೀಪಗಳು ಸಾಲು ಸಾಲಾಗಿ ನಂದಿ ಹೋಗುವ ಸಂಕಟವನ್ನು ಯಾರಿಗೆ ಹೇಳೋಣ..?

ನಮ್ಮ ಮೇಲೆ ಅತಿಯಾದ ದಬ್ಬಾಳಿಕೆ ದೌರ್ಜನ್ಯ ಹಲ್ಲೆಗಳಾದಾಗ, ಸಂಕಷ್ಟದಲ್ಲಿ ನಮ್ಮ ನಡುವೆ ತೇಲಿಬರುತ್ತಿದ್ದ ಹೆಸರು "ನಮ್ಮ ಪ್ರಸಾದ್ ಅಣ್ಣ". ಈಗ ಆ ನಮ್ಮ ಪ್ರಸಾದಣ್ಣ ಇಲ್ಲ. ಆದರೆ ಆ ಹೆಸರು ನಮ್

ರಸ್ತೆ ಅಪಘಾತ ಬೈಕ್ ಸವಾರ ಸಾವು

ಕನಕಪುರ: ಸಾತನೂರು ರಸ್ತೆ ಶಿವನಹಳ್ಳಿ ಸಮೀಪದ ಬೈಪಾಸ್ ರಸ್ತೆ ಚಿಕ್ಕಮುದ್ದು ತೋಟದ ಸಮೀಪ ಭಾನುವಾರ ಮಧ್ಯಾಹ್ನ ಸಂಭವಿಸಿದ ರಸ್ತೆ ಅಪಘಾತದಲ್ಲಿ ಬೈಕ್ ಸವಾರ ಮೃತಪಟ್ಟಿದ್ದು ಅವರ ಪುತ್ರಿ ಗಂಭೀರವಾಗಿ ಗಾಯಗೊಂಡಿರುವ ಘಟನೆ ಸಂಭವಿಸಿದೆ. ಮೃತಪಟ್ಟ ವ್ಯಕ್ತಿಯನ್ನು ತಾಲೂಕಿನ ತಾಮಸಂದ್ರ ಗ್ರಾಮದ ಮಂಜುನಾಥ್(40) ಎಂದು ಗುರ್ತಿಸಲಾಗಿದೆ. ಮಂಜುನಾಥ್ ಅವರ ಪುತ್ರಿ 8 ವರ್ಷದ ಸ್ವರೂಪ ತೀವ್ರ ಗಾಯಗೊಂಡಿದ್ದಾರೆ. ಕನಕಪುರದಿಂದ ಕಬ್ಬಾಳಿಗೆ ತೆರಳುತ್ತಿದ್ದ ಮಂಜುನಾಥ್ ತಮ್ಮ ಬೈಕ್‌ನಲ್ಲಿ: ಮಗಳ ಜೊತೆ ತೆರಳುತ್ತಿದ್ದ ವೇಳೆ ಹಿಂಬದಿಯಿಂದ ಬಂದ ವರುಣ ಕಾರ್ ಡಿಕ್ಕಿ ಹೊಡೆದಿದೆ. ಅಪಘಾತದಲ್ಲಿ ಎರಡು ವಾಹನಗಳು ಜಖಂಗೊಂಡಿದೆ. ಕೂಡಲೇ ತೀವ್ರ ಗಾಯಗೊಂಡಿದ್ದ ಇಬ್ಬರನ್ನು ಹಾರೋಹಳ್ಳಿ ಸಮೀಪದ ದಯಾನಂದ ಸಾಗರ್ ಆಸ್ಪತ್ರೆಗೆ ಇಬ್ಬರನ್ನು ಚಿಕಿತ್ಸೆಗೆ ದಾಖಲಿಸಲಾಗಿತ್ತು. ಮಂಜುನಾಥ್ ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದಾರೆ. ಪುತ್ರಿ ಸ್ವರೂಪ ಗಂಭಿರವಾಗಿ ಗಾಯಗೊಂಡಿದ್ದು ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಸರ್ಕಲ್ ಇನ್ಸ್‌ಪೆಕ್ಟರ್ ಮಿಥುನ್‌ಶಿಲ್ಪಿ ಹಾಗೂ ಸಂಚಾರಿ ಪೊಲೀಸರು ಸ್ಥಳಕ್ಕೆ ದಾವಿಸಿ ವಾಹನಗಳನ್ನು ವಶಕ್ಕೆ ಪಡೆದು ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಂಡಿದ್ದಾರೆ.

ಚುನಾವಣೆ: ಕಮಲ ಅರಳುವುದು ಗ್ಯಾರಂಟಿ



ಕನಕಪುರ: ಬೆಂಗಳೂರು ಗ್ರಾಮಾಂತರ ಲೋಕಸಭಾ ವಿಧಾನಸಭಾ ಕ್ಷೇತ್ರದಲ್ಲಿ ಈ ಬಾರಿ ಕಮಲ ಅರಳುವುದು ಗ್ಯಾರಂಟಿ ಜೆಡಿಎಸ್ ಯುವ ಉಪಾಧ್ಯಕ್ಷ ಚೆನ್ನಸ್ವಾಮಿ ಭವಿಷ್ಯ ನುಡಿದರು. ಪಟ್ಟಣದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕೇಂದ್ರ ಸರಕಾರ ಉತ್ತಮ ಆಡಳಿತ ನೀಡುವ ಮೂಲಕ ಜನಪರ ಕಾರ್ಯಕ್ರಮ ನೀಡಿದೆ. ರಾಜ್ಯ ವನ್ನು ಮಾದರಿ ರಾಜ್ಯವನ್ನಾಗಿ ಮಾಡ ಬೇಕೆಂಬ ಧೈಯದಿಂದ ಮೈತ್ರಿ ಬಿಜೆಪಿ ಅಭ್ಯರ್ಥಿಯಾಗಿರುವ ಮಂಜುನಾಥ್ ಅವರನ್ನು ಅಧಿಕಾರಕ್ಕೆ ತರಬೇಕೆಂದು ಚುನಾವಣೆಯಲ್ಲಿ ಹಗಲಿ ರುಳು ದುಡಿದಿದ್ದೇವೆ. ಕನಕಪುರ ವಿಧಾನ ಸಭಾ ಕ್ಷೇತ್ರದಲ್ಲಿ ಕಮಲ ಅರಳಿಸಲು ಮತದಾರರು ಹೆಚ್ಚು ಮತ ಹಾಕುವ ಮೂಲಕ ಬಿಜೆಪಿ ಅಭ್ಯರ್ಥಿಯನ್ನು ಗೆಲ್ಲಿಸುವ ವ್ಯಕ್ತಪಡಿಸಿದ್ದಾರೆ. ಕಾಂಗ್ರೆಸ್ ರಾಜ್ಯವನ್ನು ದಿವಾಳಿ ಮಾಡುತ್ತಿದ್ದು, ಈ ಸರ್ಕಾರ ರಾಜ್ಯಕ್ಕೆ ಕಂಠಕವೇ ಹೊರತು ಅಭಿವೃದ್ಧಿಗಾಗಿಯಲ್ಲ. ಕೇಂದ್ರದಲ್ಲಿ ಬಿಜೆಪಿ ಸರಕಾರವನ್ನು ಅಧಿಕಾರಕ್ಕೆ ತಂದರೆ ಕನಕಪುರ ವಿಶ್ವಕ್ಕೆ ಮಾದರಿಯಾಗಿ ನಿಲ್ಲಲಿದೆ. ಡಾ.ಸಿ.ಎನ್.ಮಂಜುನಾಥ್ ರವರು ಶೇ.100ರಷ್ಟು ಗೆಲ್ಲುವ ವಿಶ್ವಾಸವಿದೆ ಎಂದು ಚೆನ್ನಸ್ವಾಮಿ ತಿಳಿಸಿದರು.

ನೀರಿನ ಪೈಪ್‌ಲೈನ್ ದುರಸ್ತಿಗೊಳಿಸಿ

ಕನಕಪುರ: ನಗರದ ಮಳಗಾಳು ರಸ್ತೆಯ ಅರ್ಕಾವತಿ ಸೇತುವೆ ಬಳಿ ಕನಕಪುರ ನಗರಕ್ಕೆ ನೀರು ಪೂರೈಕೆ ಮಾಡುವ ಪೈಪ್ ಒಡೆದಿದ್ದು ಅದರಿಂದ ಲಕ್ಷಾಂತರ ಲೀಟರ್ ನೀರು ಪೋಲಾಗುತ್ತಿದ್ದು ಅದನ್ನು ಶೀಘ್ರವಾಗಿ ಸರಿಪಡಿಸಬೇಕೆಂದು ನಾಗರೀಕರು ಒತ್ತಾಯಿಸಿದ್ದಾರೆ.



ನಗರದಲ್ಲಿ ನೀರಿನ ಸಮಸ್ಯೆ ನಿವಾರಿಸಲು ನಗರಸಭೆಯು ಅರ್ಕಾವತಿ ನದಿಯಿಂದ ಕನಕಪುರಕ್ಕೆ ಪೈಪ್‌ಮೂಲಕ ನೀರು ಪೂರೈಕೆ ಮಾಡಿಕೊಳ್ಳುತ್ತಿದೆ. ಕೆಲವು ದಿನಗಳ ಹಿಂದೆ ನೀರು ಪೂರೈಕೆ ಮಾಡುವ ಪೈಪ್ ಒಡೆದಿದ್ದು ಅದರಿಂದ ಲಕ್ಷಾಂತರ ಲೀಟರ್ ನೀರು ವ್ಯರ್ಥವಾಗುತ್ತಿದೆ.

ಈಗ ಬೇಸಿಗೆ ಇರುವುದರಿಂದ ನಗರದಲ್ಲಿನ ಕೆಲವು ಬೋರ್‌ವೆಲ್‌ಗಳಲ್ಲಿ ಅಂತರ್ಜಲ ಕಡಿಮೆಯಾಗಿ ನೀರಿನ ಅಭಾವ ಸೃಷ್ಟಿಯಾಗಿದೆ. ಇಂತಹ ಸಂದರ್ಭದಲ್ಲಿ ನಗರಕ್ಕೆ ಪ್ರಮುಖವಾಗಿ ನೀರು ಪೂರೈಕೆ ಮಾಡುತ್ತಿದ್ದ ಪೈಪ್ ಒಡೆದು ನೀರು ಪೋಲಾಗುತ್ತಿದೆ ಎನ್ನುವುದು ನಾಗರೀಕರ ಆರೋಪವಾಗಿದೆ. ಇದಲ್ಲದೆ ನೀರಿನ ಪೈಪ್ ಸರಿಪಡಿಸಲು ಕೆಲವು ದಿನಗಳ ಹಿಂದೆ ಗುಂಡಿ ತೆಗೆದಿದ್ದು ಅದನ್ನು ಸರಿಪಡಿಸದೆ ಆಗೆ ಬಿಡಲಾಗಿದೆ. ಇದರಿಂದ ರಸ್ತೆಯಲ್ಲಿ ವಾಹನಗಳು ಓಡಾಡಲು ಸಮಸ್ಯೆಯಾಗುತ್ತಿದೆ. ರಸ್ತೆ ಪಕ್ಕದಲ್ಲಿ ಆಳವಾದ ಗುಂಡಿ ಇರುವುದರಿಂದ ಅಪಘಾತಗಳು ಸಂಭವಿಸುವ ಸಾಧ್ಯತೆಯಿದ್ದು ಶೀಘ್ರವಾಗಿ ಒಡೆದ ಪೈಪ್ ಸರಿಪಡಿಸಿ ಗುಂಡಿ ಮುಚ್ಚಬೇಕೆಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ.

ಕಡವೆ ಚರ್ಮ ಸಾಗಾಟ; ಇಬ್ಬರ ಬಂಧನ

ಯಳಂದೂರು: ತಾಲೂಕಿನ ಬಿಳಿಗಿರಂಗನ ಬೆಟ್ಟದ ಹುಲಿ ಸಂರಕ್ಷಣ ಮೀಸಲು ಅರಣ್ಯ ಪ್ರದೇಶದ ಮಲ್ಕಿ ಗಸ್ತಿನ ಪ್ರದೇಶದ ಕೂಳಿಗುಂಡಿ ಅರಣ್ಯ ಸಮೀಪದಲ್ಲಿ ಕಡವೆಯ ಚರ್ಮವನ್ನು ಸಾಗಾಟ ಮಾಡುತ್ತಿದ್ದ ಇಬ್ಬರು ಆರೋಪಿಗಳನ್ನು ಅರಣ್ಯ ಇಲಾಖೆ ಸಿಬ್ಬಂದಿಗಳು ಮಾಲು ಸಮೇತ ಬಂದಿಸಿದ್ದಾರೆ. ಬಿ ಆರ್ ಟಿ ಅರಣ್ಯ ಸಂರಕ್ಷಣಾಧಿಕಾರಿ ಎಸ್ ಪ್ರಭಾಕರನ್ ಅವರ ಮಾರ್ಗದರ್ಶನದಲ್ಲಿ ವಲಯ ಅರಣ್ಯ ಅಧಿಕಾರಿ ಎಚ್ ಎನ್ ನಾಗೇಂದ್ರ ನಾಯಕ್ ಸೂಚನೆ ಮೇರೆಗೆ ಭಾನುವಾರ ಮಧ್ಯಾಹ್ನ ಕಡವೆ ಪ್ರಾಣಿಯ ಚರ್ಮವನ್ನು ಅಕ್ರಮವಾಗಿ ಸಾಗಾಟ ಮಾಡುತ್ತಿದ್ದ ಸಮಯದಲ್ಲಿ ದಾಳಿ ಮಾಡಿದ್ದಾರೆ. ಬಿಳಿಗಿರಂಗನ ಬೆಟ್ಟ ಎರಕನ ಗದ್ದೆ ಪೋಡಿನ ನಿವಾಸಿಯಾದ ಬಸವಣ್ಣ (38) ಬಂಗಲೆ ಪೋಡಿನ ನಿವಾಸಿ ಕೆತೇಗೌಡ (45) ಇಬ್ಬರು ಆರೋಪಿಗಳನ್ನು ಬಂಧಿಸಲಾಗಿದೆ ಮತ್ತೆ ಇಬ್ಬರು ಆರೋಪಿಗಳಾದ ಬಂಗಲೆ ಪೋಡಿನ ನಿವಾಸಿಗಳಾದ ಬಂಗಿ ಜಡೇಗೌಡ (38) ಕೇತೇಗೌಡ(46) ತಪ್ಪಿಸಿಕೊಂಡಿದ್ದಾರೆ. ಈ ಬಗ್ಗೆ ವನ್ಯಜೀವಿ ರಕ್ಷಣೆ ಕಾಯ್ದೆ ನಿಯಮದಂತೆ ಪ್ರಕರಣವನ್ನು ದಾಖಲಿಸಿ ಇಬ್ಬರನ್ನು ನ್ಯಾಯಾಂಗ ಬಂಧನಕ್ಕೆ ನೀಡಿ ತನಿಖೆಯನ್ನು ಕೈಗೊಳ್ಳಲಾಗಿದೆ. ಕಾರ್ಯಾಚರಣೆಯಲ್ಲಿ ಆರ್ ಎಫ್ ಓ ನಾಗೇಂದ್ರ ನಾಯಕ್, ಉಪವಲಯ ಅರಣ್ಯ ಅಧಿಕಾರಿ ಯಶಸ್, ಸಿಬ್ಬಂದಿ ಮಲ್ಲಪ್ಪ ,ವರುಣ್ ಸೇರಿದಂತೆ ಇತರರು ಹಾಜರಿದ್ದರು

ಸರ್ಕಾರಗಳು ಹೆಚ್ಚಿನ ಪರಿಹಾರ ನೀಡಲಿ: ರೈತ ಸಂಘ ಆಗ್ರಹ

ಮಂಡ್ಯ: ಬೆಳೆ ಸಮೀಕ್ಷೆಯ ನಷ್ಟದ ಹಣವನ್ನು ಬರ ಪರಿಹಾರ ಕುರಿತಂತೆ ರಾಜ್ಯ ಸರ್ಕಾರ ಕೇಂದ್ರಕ್ಕೆ ಕಳುಹಿಸಿರುವ ವರದಿಯನ್ನು



ಕೇಂದ್ರ ಕೂಡಲೇ ಬಿಡುಗಡೆ ಮಾಡುವ ಮೂಲಕ ರೈತರ ನೋವಿಗೆ ಸ್ಪಂದಿಸಬೇಕೆಂದು ಪ್ರಧಾನಿ ನರೇಂದ್ರ ಮೋದಿಯವರನ್ನು ಕರ್ನಾಟಕ ರಾಜ್ಯ ರೈತಸಂಘದ ಮುಖಂಡರಾದ ಮೋಹನ್‌ಕುಮಾರ್ ಉ.ಕಿರಂಗೂರು ಪಾಪು ಅವರು ಒತ್ತಾಯಿಸಿದ್ದಾರೆ.

ಚುನಾವಣಾ ಪ್ರಚಾರಕ್ಕೆ ರಾಜ್ಯಕ್ಕೆ ಪದೇಪದೇ ಬಂದ ಮಾನ್ಯ ಪ್ರಧಾನಿ ಮೋದಿಯವರು ರೈತರ ಬರ ಪರಿಹಾರದ ಬಗ್ಗೆ, ರೈತರ ಸಂಕಷ್ಟದ ಬಗ್ಗೆ, ನೀರಿನ ವಿಷಯದ ಬಗ್ಗೆ, ಸಾಲ ಮನ್ನಾ ವಿಷಯದ ಬಗ್ಗೆ ಚಕಾರ ಎತ್ತದೆ ಮೌನ ವಹಿಸಿರುವುದು ಎಷ್ಟು ಸರಿ? ಎಂದು ಖಾರವಾಗಿ ಪಾಪು ಪ್ರಶ್ನಿಸಿದ್ದಾರೆ.

ಶೀಘ್ರವೇ ಬೆಳೆ ಒಣಗಿ ನಷ್ಟವಾಗಿರುವ ಬರ ಪರಿಹಾರವನ್ನು ರೈತರ ಖಾತೆಗೆ ಜಮೆ ಮಾಡಬೇಕೆಂದು ಕೇಂದ್ರ ಹಾಗೂ ರಾಜ್ಯ ಸರ್ಕಾರವನ್ನು ಆಗ್ರಹಿಸಿರುವ ಅವರು, ಕೇಂದ್ರ ಸರ್ಕಾರ 'ಆನೆ ಹೊಟ್ಟಿಗೆ ಅರೆಕಾಸಿನ ಮಜ್ಜಿಗೆ'ಯಂತೆ ಬರಪರಿಹಾರ ನೀಡಿರುವುದು ತರವಲ್ಲ. ರಾಜ್ಯ ಸರ್ಕಾರಕ್ಕೆ ತಾರತಮ್ಯ ನೀತಿ ಅನುಸುತ್ತಿರುವುದು ಕೇಂದ್ರಕ್ಕೆ ಶೋಭೆಯಲ್ಲ ಎಂದರು.

ರೈತರು ನೀರು ಇಲ್ಲದೆ, ಮಳೆಯೂ ಇಲ್ಲದೆ ಬೆಳೆ ನಷ್ಟದಿಂದ ತತ್ತರಿಸಿ ಹೋಗಿದ್ದಾರೆ. ರೈತರ ಬದುಕು ಶೋಚನೀಯವಾಗಿದೆ. ಬರಪರಿಹಾರವನ್ನು ತ್ವರಿತಗತಿಯಲ್ಲಿ ಸಮೀಕ್ಷೆ ಮಾಡಿ ರಾಜ್ಯದ ಬೆಳೆ ನಷ್ಟದ ವರದಿಯನ್ನು ಕೇಂದ್ರಕ್ಕೆ ಕಳುಹಿಸಿದರೂ ಸರ್ಕಾರವು ಇಂತಹ ಸಂದರ್ಭದಲ್ಲಿ ಕೂಡಲೇ ರಾಜ್ಯ ಸರ್ಕಾರ ಕೋರಿರುವ ಪರಿಹಾರದ ಮೊತ್ತವನ್ನು ಕೂಡಲೇ ಬಿಡುಗಡೆ ಮಾಡಬೇಕು. ರೈತರ ಸಂಕಷ್ಟಕ್ಕೆ ಸ್ಪಂದಿಸುವ ಕೆಲಸ ಮಾಡಬೇಕು ಹಾಗೂ ಬಾಕಿ ಉಳಿದಿರುವ ಬರ ಪರಿಹಾರದ ಮೊತ್ತವನ್ನು ಕೇಂದ್ರ ಕೂಡಲೇ ಬಿಡುಗಡೆಗೊಳಿಸಬೇಕು. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ತಮ್ಮ ತಮ್ಮ ಪ್ರತಿಷ್ಠೆ, ತಾತ್ಸಾರ ಬದಿಗೊತ್ತಿ ದೇಶಕ್ಕೆ ಅನ್ನ ನೀಡುವ ರೈತರ ಸಂಕಷ್ಟಕ್ಕೆ ಧಾವಿಸಬೇಕು. ಕೇಂದ್ರ ಬಿಡುಗಡೆ ಮಾಡಿರುವ ಅಲ್ಪಸ್ವಲ್ಪ ಬಿಡುಗಡೆ ಮಾಡಿರುವ ಪರಿಹಾರದ ರಾಜ್ಯ ಸರ್ಕಾರವೇ ಸೇರಿಸಿ ರೈತರ ಖಾತೆ ಜಮೆ ಮಾಡಬೇಕು. ರೈತರು ವರ್ಷದ ಬೆಳೆಯನ್ನೇ ನಂಬಿ ಬದುಕು ಕಟ್ಟಿಕೊಳ್ಳುತ್ತಾರೆ. ಆದರೆ ನೀರೂ ಇಲ್ಲೆ, ಮಳೆಯೂ ಇಲ್ಲದೆ ರೈತರು ಸಾಲಸೋಲ ಮಾಡಿ, ಚಿನ್ನಾಭರಣವನ್ನು ಹಣವಿಟ್ಟು ಖಾಸಗಿ ಸಾಲ, ಬ್ಯಾಂಕಿನ ಸಾಲಕ್ಕೆ ಕೈವೊಡ್ಡಿ ಬೆಳೆ ಬೆಳೆದರೂ ಬೆಳೆಯೂ ಕೈಗೆ ಸಿಗದಂತಾಗಿದೆ. ಅದಕ್ಕೆ ನಂಬಿಕೊಂಡು ವರ್ಷದ ಬೆಳೆಯಲ್ಲೇ ಮಕ್ಕಳ ವಿದ್ಯಾಭ್ಯಾಸ, ಆರೋಗ್ಯ, ಹಬ್ಬಹರಿದಿನಗಳು, ಮದುವೆ ಮುಂಜಿಗಳು, ಸಾಲಗಳಿಗೆ ಬಡ್ಡಿ ಇವೆಲ್ಲವನ್ನೂ ನಿಭಾಯಿಸಿಕೊಂಡು ಇದರ ಜತೆ ಸಂಸ್ಕಾರದ ಖರ್ಚು-ವೆಚ್ಚಗಳನ್ನು ಸರಿದೂಗಿಸಿಕೊಂಡು ಹೋಗುವ ಪರಿಸ್ಥಿತಿ ನಿರ್ಮಾಣವಾಗಿದೆ. ಆದ್ದರಿಂದ ರೈತರು ತುಂಬಾ ಕಷ್ಟಕ್ಕೆ ಸಿಲುಕಿದ್ದಾರೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕೂಡಲೇ ರೈತರ ಖಾತೆಗೆ ಹೆಚ್ಚಿನ ಪರಿಹಾರವನ್ನು ಜಮೆ ಮಾಡಬೇಕೆಂದು ಪಾಪು ಒತ್ತಾಯಿಸಿದ್ದಾರೆ.

ಬೇಸಿಗೆ ಸಮಯದಲ್ಲಿ ಆರೋಗ್ಯ ಕಾಳಜಿ ಅಗತ್ಯ

ಕಾಯಕಯೋಗಿ ವಾರ್ತೆ ರಾಮನಗರ

ಕಾಲರಾ ಒಂದು ಬ್ಯಾಕ್ಟೀರಿಯಾ ಸೋಂಕಾಗಿದ್ದು ಇದು ಕಲುಷಿತ ನೀರು ಮತ್ತು ಅನಾರೋಗ್ಯಕರ ಆಹಾರ ಪದ್ದತಿಯಿಂದ ಹರಡುವ ಸೋಂಕು. ಕಾಲರಾ ಸೋಂಕಿನ ಲಕ್ಷಣಗಳು ಆಹಾರ ಸೇವನೆಯ ನಂತರ ವಾಂತಿಯಾಗುವುದು, ಅತಿಯಾದ ನೀರಿನಿಂದ ಕೂಡಿದ ಬೇದಿ, ಅತಿಸಾರದ ಪರಿಣಾಮದಿಂದಾಗಿ ದೇಹದಲ್ಲಿ ನಿಶ್ಯಕ್ತಿ, ನಿರ್ಜಲೀಕರಣದಿಂದಾಗಿ ಬಾಯಿ, ಕಣ್ಣುಗಳು ಒಣಗುವುದು, ಮೂತ್ರ ವಿಸರ್ಜನೆ ಇಲ್ಲದಿರುವುದು, ವಿಪರೀತ ಬಾಯಾರಿಕೆ ಮತ್ತು ಸುಸ್ತು, ಅತಿಯಾದ ನಿದ್ದೆ, ತಲೆನೋವು, ಮಾಂಸಖಂಡಗಳ ಸೆಳೆತ, ಹೃದಯ ಬಡಿತ ಸಾಮಾನ್ಯಕಿಂತ ಹೆಚ್ಚಾಗುವುದ ಅಥವಾ ಕಡಿಮೆಯಾಗುವುದು, ದೇಹದ ತೂಕವು ಕಡಿಮೆಯಾಗುವುದು, ಇಂತಹ ಲಕ್ಷಣಗಳು ಕಂಡುಬಂದಲ್ಲಿ ಹತ್ತಿರದ ಸರ್ಕಾರಿ ಆಸ್ಪತ್ರೆಗೆ ಭೇಟಿನೀಡಿ ಸೂಕ್ತ ಚಿಕಿತ್ಸೆ ಪಡೆಯುವ ಮೂಲಕ ಸಂಪೂರ್ಣ ಗುಣಪಡಿಸಬಹುದು ಎಂದು ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಅರ್ಪಿತ. ಕೆ.ಜೆ ಅವರು ತಿಳಿಸಿದರು.

ಅವರು ಇಂದು ಗೊಲ್ಲರಹಳ್ಳಿ ಗ್ರಾಮದಲ್ಲಿ ಜಿಲ್ಲಾಡಳಿತ ಜಿಲ್ಲಾಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಚೇರಿ, ಜಿಲ್ಲಾ ಮಾಹಿತಿ ಶಿಕ್ಷಣ ಮತ್ತು ಸಂವಹನ ವಿಭಾಗ, ತಾಲ್ಲೂಕು ಆರೋಗ್ಯಾಧಿಕಾರಿಗಳ ಕಚೇರಿ ಮತ್ತು ಲಕ್ಷ್ಮೀಪುರ ಪ್ರಾಥಮಿಕ ಆರೋಗ್ಯ ಕೇಂದ್ರದ ಸಹಯೋಗದೊಂದಿಗೆ ಬೇಸಿಗೆ ಸಮಯದಲ್ಲಿನ ಮುನ್ನೆಚ್ಚರಿಕೆ ಕುರಿತು ಆಯೋಜಿಸಲಾಗಿದ್ದ ಆರೋಗ್ಯ ಶಿಕ್ಷಣ ಕಾರ್ಯಕ್ರಮದಲ್ಲಿ ಮಾತನಾಡಿದರು.

ಸಾರ್ವಜನಿಕರು ಹಬ್ಬ, ಜಾತ್ರೆ, ಸಾರ್ವಜನಿಕ ಸಭೆ, ಸಮಾರಂಭಗಳಲ್ಲಿ ಕಾಲರಾ ತಡೆಗಟ್ಟಲು ಮುನ್ನೆಚ್ಚರಿಕೆ ಕ್ರಮಗಳಾದ ಕುಡಿಯುವ ನೀರಿನ ಶುದ್ದತೆ ಬಗ್ಗೆ ಎಚ್ಚರ ವಹಿಸುವುದು. ಚೆನ್ನಾಗಿ ಕುದಿಸಿ ಆರಿಸಿದ ನೀರನ್ನು ಕುಡಿಯಬೇಕು, ಸೊಪ್ಪು ತರಕಾರಿಗಳನ್ನು ಶುದ್ದವಾದ ನೀರಿನಿಂದ ಸ್ವಚ್ಚಗೊಳಿಸಿದ ನಂತರ ಸೇವಿಸುವುದು, ಶೌಚಾಲಯವನ್ನು ಬಳಸಿದ ನಂತರ ಹಾಗೂ ಆಹಾರವನ್ನು ತಯಾರಿಸುವ, ಸೇವಿಸುವ ಮೊದಲು ಸಾಬೂನು ಬಳಸಿ ಕೈಯನ್ನು ಚೆನ್ನಾಗಿ ತೊಳೆಯುವುದು, ಮನೆ ಆಹಾರ ಸೇವನೆಗೆ ಆದ್ಯತೆ ನೀಡಿ, ಅಸುರಕ್ಷಿತವಾಗಿ ತಯಾರಿಸಿದ ಹೊರಗಿನ ಆಹಾರವನ್ನು ಸೇವಿಸುವ ಮುನ್ನ ಎಚ್ಚರ ವಹಿಸುವುದು, ದೇಹದಲ್ಲಿ ಬಳಲಿಕೆ ಕಂಡುಬಂದರೆ ಓ.ಆರ್.ಎಸ್, ಉಪ್ಪು ಬೆರೆಸಿದ ನಿಂಬೆ ಪಾನಕ, ಹೆಚ್ಚಿನ ಪ್ರಮಾಣದಲ್ಲಿ ನೀರು ಕುಡಿಯುವುದರ ಬಗ್ಗೆ ಆರೋಗ್ಯ ಶಿಕ್ಷಣದ ಕುರಿತು ತಿಳಿಸಿದರು.



ತಾಲ್ಲೂಕು ಆರೋಗ್ಯಾಧಿಕಾರಿ ಡಾ. ಉಮಾ ಅವರು ಮಾತನಾಡಿ, ಬೇಸಿಗೆಯಲ್ಲಿ ಬಿಸಿ ಗಾಳಿಯ ಸಂದರ್ಭದಲ್ಲಿ ದೇಹದಲ್ಲಿ ನೀರಿನ ಅಂಶವು ಕಡಿಮೆಯಾದಲ್ಲಿ ಸೂರ್ಯಾಘಾತ ಸಾಧ್ಯತೆಯು ಅಧಿಕವಾಗಿರುತ್ತದೆ. ಸೂರ್ಯಾಘಾತದಿಂದ ರಕ್ಷಿಸಿಕೊಳ್ಳಲು ಮದ್ಯಾಹ್ನದ ಸಮಯದಲ್ಲಿ ಶ್ರಮದಾಯಕ ಕೆಲಸಗಳನ್ನು ಮಾಡದಿರುವುದು, ಹೆಚ್ಚು ಶುದ್ದ ನೀರನ್ನು ಕುಡಿಯುವುದು, ತಿಳಿ ಹತ್ತಿ ಬಟ್ಟೆಯನ್ನು ಧರಿಸುವುದು, ಸಕ್ಕರೆಯುಕ್ತ ಪಾನೀಯ / ಕಾರ್ಬೋನೇಟೆಡ್ ಪಾನೀಯಗಳನ್ನು ಕುಡಿಯದಿರುವುದು, ಓ.ಆರ್. ಎಸ್, ಎಳನೀರಿನ ಬಳಕೆ ಕುರಿತು ಮಾಹಿತಿ ನೀಡಿದರು.

ಕಾರ್ಯಕ್ರಮದಲ್ಲಿ ವೈದ್ಯಾಧಿಕಾರಿ ಡಾ. ಶ್ವೇತಾ, ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ದಾಸಪ್ಪ, ಎಪಿಡೆಮೋಲಜಿಸ್ಟ್ ನಿವೇದಿತಾ, ಪ್ರಾಥಮಿಕ ಆರೋಗ್ಯ ಸುರಕ್ಷಣಾಧಿಕಾರಿ, ಆರೋಗ್ಯ ನಿರೀಕ್ಷಣಾಧಿಕಾರಿಗಳು ಮತ್ತು ಆಶಾ ಕಾರ್ಯಕರ್ತೆಯರು, ಸಾರ್ವಜನಿಕರು ಹಾಜರಿದ್ದರು.



ಪಾವಗಡ ಪಟ್ಟಣದಲ್ಲಿ ಇಂದು ಜಿಲ್ಲಾಧಿಕಾರಿ ಶುಭ ಕಲ್ಯಾಣ್ ಅವರು ಅಗಸರ ಕುಂಟೆ ಕೆರೆ ಪರಿಶೀಲನೆ ಮಾಡಿದರು.



ನಾಗಲಮಡಿಕೆ ಮೇವು ಬ್ಯಾಂಕ್ ಬಳಿ ರೈತ ಮಹಿಳೆ ಉಮಾ ಎಂಬುವರನ್ನು ಜಿಲ್ಲಾಧಿಲಾರಿ ಶುಭಾ ಕಲ್ಯಾಣ್ ಈ ಸಂದರ್ಭ ಮಾತನ್ನಾಡಿಸಿದರು.

ವಾರಸುದಾರರ ಪತ್ತೆಗೆ ಮನವಿ

ರಾಮನಗರ: ನಂ. 1087 ಬಿಡದಿ ಸುಭಾಷ್ ಆಸ್ಪತ್ರೆ ಮುಂಭಾಗದ ಬೆಂಗಳೂರು–ಮೈಸೂರು ರಸ್ತೆಯನ್ನು ದಾಟುತ್ತಿದ್ದ ಸುಮಾರು 40–45 ವರ್ಷದ ಅಪರಿಚಿತ ವ್ಯಕ್ತಿಗೆ ದ್ವಿಚಕ್ರ ವಾಹನವು ಅತಿವೇಗದಿಂದ ಬಂದು ಡಿಕ್ಕಿ ಹೊಡೆದಿರುವುದರಿಂದ ಅಪರಿಚಿತ ವ್ಯಕ್ತಿಯ ತಲೆಗೆ, ಹಣೆಗೆ, ಮೈಕೈ, ಕಾಲುಗಳೀಗೆ ಏಟಾಗಿ ರಕ್ತಗಾಯವಾಗಿ ಮೃತಪಟ್ಟಿರುತ್ತಾರೆ. ಮೃತರ ಹೆಸರು ಹಾಗೂ ವಿಳಾಸ ತಿಳಿದುಬಂದಿರುವುದಿಲ್ಲ. ಕೋಲುಮುಖ, 5.7 ಅಡಿ ಎತ್ತರ, ಸಾಧಾರಣ ಮೈಕಟ್ಟು, ಎಣ್ಣೆಗೆಂಪು ಮೈಬಣ್ಣ, ಇವರು ಹಳದಿ–ಕಾಫಿ ಮಿಶ್ರಿತ ಚೆಕ್ಸ್ ಬಣ್ಣದ ಷರ್ಟ್, ಮಾಸಲು ಬಣ್ಣದ ಪ್ಯಾಂಟ್ ಧರಿಸಿರುತ್ತಾರೆ. ಇವರ ವಾರಸುದಾರರು ಯಾರದರೂ ಇದ್ದಲ್ಲಿ ಪೊಲೀಸ್ ಸಬ್‌ಇನ್ಸ್‌ಪೆಕ್ಟರ್, ಬಿಡದಿ ಪೊಲೀಸ್ ಠಾಣೆ, ರಾಮನಗರ ಜಿಲ್ಲೆ ಇವರನ್ನು ಸಂಪರ್ಕಿಸಬಹುದಾಗಿದೆ.



ಮಿಡಿಗೇಶಿ ಮೇವು ಬ್ಯಾಂಕ್ ಗೆ ಭೇಟಿ ನೀಡಿದ ಜಿಲ್ಲಾಧಿಕಾರಿ ಶುಭಾ ಕಲ್ಯಾಣ್ ಅವರು ರೈತರೊಂದಿಗೆ ಮೇವಿನ ವಿತರಣೆ ಬಗ್ಗೆ ಮಾಹಿತಿ ಪಡೆದರು.

ಶ್ರೀನಿವಾಸ್ ಪ್ರಸಾದ್ ನಿಧನಕ್ಕೆ ಕಂಬನಿ

ಗುಂಡ್ಲುಪೇಟೆ: ಚಾಮರಾಜನಗರ (ಮೀಸಲು) ಲೋಕಸಭಾ ಕ್ಷೇತ್ರದ ಸಂಸದರಾದ ವಿ.ಶ್ರೀನಿವಾಸ್ ಪ್ರಸಾದ್ ಅವರು ಅನಾರೋಗ್ಯದ ಕಾರಣ ನಿಧನ ಹೊಂದಿದ್ದಾರೆ. ವಿ.ಶ್ರೀನಿವಾಸ್ ಪ್ರಸಾದ್ ಅವರು ಕೇಂದ್ರ ಮತ್ತು ರಾಜ್ಯ ಸರ್ಕಾರಗಳಲ್ಲಿ ಶಾಸಕರಾಗಿ ಸಂಸದರಾಗಿ

ಕಾಯಕಯೋಗಿ

30/04/2024
ಮಂಗಳವಾರ

ಕುಡಿಯುವ ನೀರಿನ ಸಮಸ್ಯೆಗೆ ಶೀಘ್ರ ಸ್ಪಂದಿಸಿ



ಬೆಂಗಳೂರು ಗ್ರಾಮಾಂತರ ಜಿಲ್ಲೆ: ಜಿಲ್ಲೆಯ ನಾಲ್ಕು ತಾಲ್ಲೂಕುಗಳ ಯಾವುದೇ ಗ್ರಾಮೀಣ ಪ್ರದೇಶದಲ್ಲಿ ಅಥವಾ ನಗರ ಪ್ರದೇಶಗಳಲ್ಲಿ ಕುಡಿಯುವ ನೀರು ಸಮಸ್ಯೆ ಕಂಡುಬಂದಲ್ಲಿ ಶೀಘ್ರ ಸ್ಪಂದಿಸಿ ಕುಡಿಯುವ ನೀರಿನ ಸಮಸ್ಯೆ ಬಗೆಹರಿಸಿ ಎಂದು ಜಿಲ್ಲಾಧಿಕಾರಿ ಡಾ.ಎನ್ ಶಿವಶಂಕರ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರ ಮೇಲ್ವಿಚಾರಣೆಯಲ್ಲಿ ಜಿಲ್ಲೆಯ ನಾಲ್ಕು ತಾಲೂಕುಗಳಲ್ಲಿ ಕುಡಿಯುವ ನೀರು ಹಾಗೂ ಜಾನುವಾರುಗಳಿಗೆ ಮೇವು ಒದಗಿಸುವ ಸಂಬಂಧ ಪರಿಶೀಲನಾ ಸಭೆ ಜಿಲ್ಲಾಧಿಕಾರಿ ಡಾ ಶಿವಶಂಕರ್ ಎನ್ ಅವರ ಅಧ್ಯಕ್ಷತೆಯಲ್ಲಿ ಜಿಲ್ಲಾಡಳಿತ ಭವನದ ಜಿಲ್ಲಾಧಿಕಾರಿಗಳ ನ್ಯಾಯಾಲಯ ಸಭಾಂಗಣದಲ್ಲಿ ಸೋಮವಾರ ನಡೆಯಿತು.

ಕುಡಿಯುವ ನೀರಿನ ಸಮಸ್ಯೆ ಉಂಟಾಗುವ ಗ್ರಾಮ ಹಾಗೂ ನಗರ ಪ್ರದೇಶಗಳಲ್ಲಿ ಪರ್ಯಾಯವಾಗಿ ನೀರು ಪೂರೈಸಲು ಖಾಸಗಿ ಕೊಳವೆ ಬಾವಿಗಳನ್ನು ಗುರುತಿಸಲು ಮೊದಲ ಆದ್ಯತೆ ನೀಡಿ. ಅವಶ್ಯವಿದ್ದಲ್ಲಿ ಖಾಸಗಿ ಟ್ಯಾಂಕರ್ ಗಳ ಮೂಲಕ ನೀರನ್ನು ಪೂರೈಸಲು ಕ್ರಮ ವಹಿಸಿ ಎಂದು ಜಿಲ್ಲಾಧಿಕಾರಿ ಅಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲೆಯ ನಾಲ್ಕು ತಾಲ್ಲೂಕುಗಳಲ್ಲಿ ಕುಡಿಯುವ ನೀರಿನ ಪರಿಸ್ಥಿತಿ ನೋಡುವುದಾದರೆ ನೆಲಮಂಗಲದ ನಗರ ವ್ಯಾಪ್ತಿಯಲ್ಲಿ ಕೆಲವು ಭಾಗ ಹಾಗೂ ದೇವನಹಳ್ಳಿ ತಾಲ್ಲೂಕಿನ ವೆಂಕಟಗಿರಿ ಕೋಟೆ ಪಂಚಾಯಿತಿ ವ್ಯಾಪ್ತಿಯಲ್ಲಿ, ಚನ್ನರಾಯಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ಮತ್ತು ಬೂದಿಗೆರೆಯ ಇಂದ್ರಹಳ್ಳಿ ಗ್ರಾಮಗಳಲ್ಲಿ ಸ್ವಲ್ಪ ಪ್ರಮಾಣದ ಸಮಸ್ಯೆ ಕಂಡು ಬಂದಿದ್ದು ಈಗಾಗಲೇ ಟ್ಯಾಂಕರ್ ಗಳ ಮೂಲಕ ನೀರು ಪೂರೈಕೆ ಮಾಡಲಾಗುತ್ತಿದೆ. ಬರಗಾಲದಿಂದ ಕೊಳವೆಬಾವಿಗಳಲ್ಲಿ 10 ಅಡಿಯಷ್ಟು ನೀರು ಇಳಿಕೆಯಾಗಿದೆ. ಯಾವುದೇ ನಗರ ಗ್ರಾಮೀಣ ಪ್ರದೇಶದಲ್ಲಿ ಸಮಸ್ಯೆ ಕಂಡುಬಂದಲ್ಲಿ ತ್ವರಿತವಾಗಿ ಸಮಸ್ಯೆ ಬಗೆಹರಿಸಲಾಗುವುದು ಎಂದು ಅವರು ಮಾಹಿತಿ ನೀಡಿದರು.

ಜಾನುವಾರುಗಳಿಗೆ ಮೇವಿನ ಸಮಸ್ಯೆ ಇದುವರೆಗೂ ಕಂಡುಬಂದಿಲ್ಲ, ಗೋಶಾಲೆಗಳಲ್ಲಿ ಹಚ್ಚಿನ ಮೇವು ಸಂಗ್ರಹಿಸಿಡಿಲು ಅಧಿಕಾರಿಗಳಿಗೆ ಸೂಚಿಸಿದರು. ಕಡ್ಡಾಯವಾಗಿ ಗ್ರಾ.ಪಂ ವ್ಯಾಪ್ತಿಯಲ್ಲಿನ ಜಾನುವಾರುಗಳ ಕುಡಿಯುವ ನೀರಿನ ತೊಟ್ಟಿಗಳನ್ನು ನಿತ್ಯವೂ ಸ್ವಚ್ಛಗೊಳಿಸಿ, ನೀರಿನ ವ್ಯವಸ್ಥೆಯನ್ನು ಒದಗಿಸುವ ಕೆಲಸ ಮಾಡಬೇಕು. ಬರ ಪರಿಸ್ಥಿತಿಯನ್ನು ಸಮಗ್ರವಾಗಿ ನಿರ್ವಹಿಸಲು ತಾಲ್ಲೂಕುವಾರು ಒಬ್ಬ ನೋಡಲ್ ಅಧಿಕಾರಿಯನ್ನು ನೇಮಕ ಮಾಡಲಾಗಿದೆ ವಾರಕ್ಕೊಮ್ಮೆ ತಾಲ್ಲೂಕುಗಳಿಗೆ ಭೇಟಿ ನೀಡಿ ವರದಿ ನೀಡಬೇಕು ಎಂದು ಹೇಳಿದರು.

ಗುಡುಗು ಸಿಡಿಲಿನ ಅಪಾಯದಿಂದ ರಕ್ಷಣೆ

ಗುಡುಗು ಸಿಡಿಲಿನ ವೇಳೆಯಲ್ಲಿ ಜನರು ಹಾಗೂ ಜಾನುವಾರು ಸಂರಕ್ಷಿಸಿಕೊಳ್ಳಲು ಹೊಲ–ಗದ್ದೆಗಳಲ್ಲಿ ರೈತರು ಕೆಲಸ ಮಾಡುವಾಗ ಗಿಡ–ಮರಗಳ ಆಶ್ರಯ ಪಡೆಯುವುದನ್ನು ಮಾಡಬಾರದು. ಅಕಾಲಿಕ ಮಳೆ ಸಂದರ್ಭ ಕಂಡುಬ ಂದಲ್ಲಿ ಮನೆಗಳಿಗೆ ತೆರಳಿ. ಬಿಸಿಗಾಳಿ, ಗುಡುಗು ಸಿಡಿಲು ಬಗ್ಗೆ ಮುನ್ನೆಚ್ಚರಿಕೆ ಪಾಲಿಸಲು ಸ್ಥಳೀಯವಾಗಿ ಜನರಲ್ಲಿ ಅರಿವು ಮೂಡಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಬಿಸಿಗಾಳಿಯಿಂದ ರಕ್ಷಣೆ ಪಡೆಯಿರಿ:– ಏಪ್ರಿಲ್ ಹಾಗೂ ಮೇ ತಿಂಗಳಲ್ಲಿ ಬಿಸಿಗಾಳಿ ಆತಂಕವಿದ್ದು, ಬಿಸಿಲಿನಿಂದ ರಕ್ಷಣೆ ಪಡೆಯುವುದು ಮುಖ್ಯ. ಜನರು ಬಿಸಿಲಿನ ಸಮಯದಲ್ಲಿ ಮನೆಗಳಿಂದ ಅತೀ ಅವಶ್ಯವಿದ್ದಾಗ ಮಾತ್ರ ಹೊರ ಬನ್ನಿ, ಅನಗತ್ಯ ಬಿಸಿಲಿನಲ್ಲಿ ಓಡಾಡುವುದು ನಿಲ್ಲಿಸಬೇಕು. ಮನೆಯಿಂದ ಹೊರಗಡೆ ಓಡಾಡುವ ವೇಳೆ ತಲೆ ಭಾಗಕ್ಕೆ ಟೋಪಿ ಇಲ್ಲವೇ ಬಟ್ಟೆಯನ್ನು ಬಳಸಿಕೊಂಡು ಬಿಸಿಗಾಳಿಯಿಂದ ರಕ್ಷಣೆ ಪಡೆಯಿರಿ. ಸಭೆಯಲ್ಲಿ ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಣಾಧಿಕಾರಿ ಡಾ.ಅನುರಾಧ ಕೆ.ಎನ್, ಅಪರ ಜಿಲ್ಲಾಧಿಕಾರಿ ಸಂಗಪ್ಪ ಸೇರಿದಂತೆ ಜಿಲ್ಲಾ ಮಟ್ಟದ ಅಧಿಕಾರಿಗಳು, ತಾಲ್ಲೂಕು ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.



ಸಮಾಜ ಕಲ್ಯಾಣ ಹಾಗೂ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವಾದ ಡಾ.ಹೆಚ್.ಸಿ.ಮಹದೇವಪ್ಪ ಅವರು ಹಿರಿಯ ನಾಯಕರು ಹಾಗೂ ಸಂಸದರಾದ ವಿ.ಶ್ರೀನಿವಾಸಪ್ರಸಾದ್ ಅವರ ಜಯಲಕ್ಷ್ಮೀಪುರಂನಲ್ಲಿರುವ ಭೀಮಸದನ ನಿವಾಸಕ್ಕೆ ಭೇಟಿ ನೀಡಿ ಪಾರ್ಥಿವ ಶರೀರದ ಅಂತಿಮ ದರ್ಶನ ಪಡೆದರು.



21ನೇ ವರ್ಷದ ಉಚಿತ ಬೇಸಿಗೆ ಕ್ರೀಡಾ ತರಬೇತಿ ಶಿಬಿರದಲ್ಲಿ ಸಾಹಿತಿ ಡಾ.ನಂಗಲಿ ಚಂದ್ರಶೇಖರ್

ಮಕ್ಕಳ ಮನಸ್ಸು ಸತ್ಯದ ಸೂಜಿಮೊನೆಯಂತಾಗಬೇಕು



ದೇವನಹಳ್ಳಿ: ಮಕ್ಕಳ ಮನಸ್ಸು ಸತ್ಯದ ಸೂಜಿ ಮೊನೆಯಂತಾಗಬೇಕು. ಮಕ್ಕಳಲ್ಲಿ ಈಗಿನಿಂದಲೇ ಸುಳ್ಳಿನ ಬಲೂನ್ ಅನ್ನು ಹೊಡೆದು ಸತ್ಯದೆಡೆಗೆ ಕರೆದುಕೊಂಡು ಹೋಗಬೇಕು ಎಂದು ಸಾಹಿತಿ ಡಾ.ನಂಗಲಿ ಚಂದ್ರಶೇಖರ್ ತಿಳಿಸಿದರು.

ದೇವನಹಳ್ಳಿ ಪಟ್ಟಣದ ಸರಕಾರಿ ಜೂನಿಯರ್ ಕಾಲೇಜು ಆಟದ ಮೈದಾನದಲ್ಲಿ ದೇವನಹಳ್ಳಿ ಕ್ರೀಡಾ ಮತ್ತು ಸಾಂಸ್ಕೃತಿಕ ಸಂಘ, ಜೇಸಿಐ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಂಡಿದ್ದ 21ನೇ ವರ್ಷದ ಉಚಿತ ಬೇಸಿಗೆ ಕ್ರೀಡಾ ತರಬೇತಿ ಶಿಬಿರದ ಮೂರನೇ ದಿನದ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಪ್ರತಿ ಮಕ್ಕಳಲ್ಲಿ ವ್ಯಕ್ತಿತ್ವ ವಿಕಸನವಾಗಬೇಕೆಂದರೆ ಅವರಲ್ಲಿ ಆತ್ಮಸ್ಥೈರ್ಯ ಹೆಚ್ಚಿಸಬೇಕು. ಸೃಷ್ಟಿ, ಕ್ರಿಯ, ಲಯ ಈ ಮೂರು ಬ್ರಹ್ಮ, ವಿಷ್ಣು, ಮಹೇಶ್ವರ ಇದ್ದಹಾಗೆ, ಪುರಾಣಗಳನ್ನು ಮೌಖಿಕವಾಗಿ ನಂಬಬಾರದು. ಪ್ರಕೃತಿಯಲ್ಲಿನ ನೀರು, ಗಾಳಿ, ಬೆಂಕಿ, ಭೂಮಿ ಮತ್ತು ಬಾಹ್ಯಾಕಾಶಗಳನ್ನು ಪಂಚಭೂತಗಳು ಎಂದು ಕರೆಯಲಾಗುತ್ತದೆ. ಈ ಅಂಶಗಳು ಮಾನವ ದೇಹವನ್ನು ಒಳಗೊಂಡಂತೆ ಸೃಷ್ಟಿಯಲ್ಲಿನ ಎಲ್ಲಾ ವಸ್ತುಗಳ ಸೃಷ್ಟಿಗೆ ಕಾರಣವಾಗುತ್ತವೆ ಎಂದು ವಿಮರ್ಷಿಸಿದರು. ರಾಜ್ಯ ಕೃಷಿ ಪಂಡಿತ ಪ್ರಶಸ್ತಿ ಪುರಸ್ಕೃತ ಶಿವನಾಪುರ ರಮೇಶ್ ಮಾತನಾಡಿ, ಮಕ್ಕಳಿಗೆ ಬಾಲ್ಯದಿಂದಲೇ ಶಿಕ್ಷಣದ ಜೊತೆಗೆ ಪರಿಸರ ಮತ್ತು ಕ್ರೀಡೆಗಳಿಗೆ ಹೆಚ್ಚಿನ ಆಸಕ್ತಿ ಮೂಡಿಸಬೇಕು. ಸದೃಢವಾಗಿ ಸಮಾಜವನ್ನು ಕಟ್ಟಬೇಕಾದರೆ ಕ್ರೀಡೆಗಳ ಪಾತ್ರವು ಅತ್ಯವಶ್ಯಕವಾಗಿರುತ್ತದೆ. ಬೇಸಿಗೆ ಶಿಬಿರವನ್ನು ಸಮರ್ಪಕವಾಗಿ ಬಳಸಿಕೊಳ್ಳಿ ಎಂದು ಸಲಹೆ ಮಾಡಿದರು. ದೇವನಹಳ್ಳಿ ಕ್ರೀಡಾ ಮತ್ತು ಸಾಂಸ್ಕೃತಿಕ ಸಂಘದ ನೂತನ ಅಧ್ಯಕ್ಷರಾಗಿ ಅಧಿಕಾರವನ್ನು ವಿಜಯ್‌ಕುಮಾರ್ ವಹಿಸಿಕೊಂಡು ಮಾತನಾಡಿ, ಸತತವಾಗಿ ಶಿಬಿರಗಳನ್ನು 21 ವರ್ಷಗಳಿಂದ ಮಾಡಿಕೊಂಡು ಬರಲಾಗುತ್ತಿದೆ. ಈ ಶಿಬಿರದಲ್ಲಿ ನುರಿತ ತರಬೇತುದಾರರಿಂದ ಕರಾಟೆ, ಅಥ್ಲೆಟಿಕ್, ಕಬ್ಬಡಿ, ಯೋಗ, ಜಾನಪದ ನೃತ್ಯ, ಕ್ರಿಕೇಟ್, ಥ್ರೋಬಾಲ್ ತರಬೇತಿ ನೀಡಿ ಪ್ರೋತ್ಸಾಹಿಸುವ ಕೆಲಸ ಮಾಡಲಾಗುತ್ತದೆ. ಮುಂದೆಯೂ ಸಹ ಪ್ರಾಮಾಣಿಕವಾಗಿ ಎಲ್ಲರ ಸಹಮತ ನೆರವೇರಿಸಿಕೊಂಡು ಬರಲಾಗುತ್ತದೆ ಎಂದರು.

ಶಿಬಿರಾರ್ಥಿಗಳಿಗೆ ದೈನಂದಿನ ಚಟುವಟಿಕೆ

ಬೆಳಿಗ್ಗೆ ಬಾದಾಮಿ ಹಾಲು, ಮೊಟ್ಟೆ, ಬ್ರೆಡ್, ಸಂಜೆ ಬಾದಾಮಿ ಹಾಲು, ಬಿಸ್ಕೆಟ್ ನೀಡಲಾಗುತ್ತದೆ. ದೈನಂದಿನ ಚಟುವಟಿಕೆಯಲ್ಲಿ ನುರಿತ ತರಬೇತುದಾರರಿಂದ ಕ್ರೀಡೆಗಳನ್ನು ಆಯೋಜಿಸಲಾಗುತ್ತದೆ. ಇದೇ ಸಂದರ್ಭದಲ್ಲಿ ಪುರಸಭಾ ಸದಸ್ಯರಾದ ಜಿ.ಎ.ರವೀಂದ್ರ, ಎಸ್.ನಾಗೇಶ್, ಸಂಘದ ನಿಕಟಪೂರ್ವ ಅಧ್ಯಕ್ಷ ಪುಟ್ಟಸ್ವಾಮಿ, ಪೂರ್ವಾಧ್ಯಕ್ಷರಾದ ಶಶಿಧರ್, ಕೆ. ಎಸ್.ಪ್ರಭಾಕರ್, ಸಿ.ಎಂ.ವೆಂಕಟೇಶ್, ಪ್ರಧಾನ ಕಾರ್ಯದರ್ಶಿ ಟಿ.ಆರ್.ಲೋಕೇಶ್, ಜೇಸಿಐ ಅಧ್ಯಕ್ಷ ಕಿರಣ್‌ಯಾದವ್, ಶಿವಾಜಿಗೌಡ, ನೆರಗನಹಳ್ಳಿ ಶ್ರೀನಿವಾಸ್, ಅಕ್ಷಯ್, ಸಂಘಟನಾ ಕಾರ್ಯದರ್ಶಿ ಎನ್.ನಟರಾಜ್, ರೆಡ್ಡಿ, ಶಂಕರ್, ಮುರಳಿ, ರಮೇಶ್, ಮಕ್ಕಳು ಇನ್ನಿತರರು ಇದ್ದರು.

ಸ್ಪೇನ್ ಯುವಕನ ವರಿಸಿದ ಕರ್ನಾಟಕದ ಯುವತಿ



ಕೆ.ಆರ್.ನೀಲಕಂಠ, ಕೃಷ್ಣರಾಜಪೇಟೆ

ಕೆ.ಆರ್.ಪೇಟೆ ಪಟ್ಟಣದ ನಂಜಮ್ಮ ಮುದ್ದೇಗೌಡ ಸಮುದಾಯ ಭವನದಲ್ಲಿ ದಾಂಪತ್ಯ ಜೀವನಕ್ಕೆ ಕಾಲಿಟ್ಟ ಜಾನ್‌ವೈಡಲ್ ಮತ್ತು ಬಿ.ಆರ್.ದೀಕ್ಷಿತಾ, ಪೋಷಕರ ಸಂಭ್ರಮ. ಕೆ.ಆರ್.ಪೇಟೆ ಪಟ್ಟಣದ ಶಮಂತ್ ಟೆಕ್ಸ್‌ಟೈಲ್ಸ್ ಮಾಲೀಕರಾದ ರವೀಂದ್ರನಾಥ್ ಅವರ ಪುತ್ರಿ ದೀಕ್ಷಿತಾ ಕೊಯಮತ್ತೂರಿನ ಈಶಾ ಫೌಂಡೇಶನ್‌ನಲ್ಲಿ ಯೋಗ ಶಿಕ್ಷಕಿಯಾಗಿ ಕೆಲಸ ಮಾಡುತ್ತಿದ್ದಾಗ ಸ್ಪೇನ್ ದೇಶದ ಬಾರ್ಸಿಲೋನ ನಗರದ ಯುವಕ ಜಾನ್‌ವೈಡಲ್ ಪರಿಚಯವಾಗಿ, ಪರಿಚಯ ಪ್ರೇಮಕ್ಕೆ ತಿರುಗಿತು. ಈಶಾ ಫೌಂಡೇಶನ್ ಮುಖ್ಯಸ್ಥರಾದ ಸದ್ಗುರು ಶ್ರೀಶ್ರೀ ಜಗ್ಗಿವಾಸುದೇವ್ ಅವರ ಮೂಲಕ ಎರಡೂ ಕುಟುಂಬಗಳ ಮನವೊಲಿಸಿದ ಪರಿಣಾಮವಾಗಿ ಇಂದು ಕೆ.ಆರ್.ಪೇಟೆ ಪಟ್ಟಣದಲ್ಲಿ ಸಂಪ್ರದಾಯ ಬದ್ದವಾಗಿ ದಾಂಪತ್ಯ ಜೀವನಕ್ಕೆ ಕಾಲಿಟ್ಟರು.

ವರ ಜಾನ್‌ವೈಡಲ್ ತಂದೆತಾಯಿಗಳು, ಸಹೋದರ, ಸಹೋದರಿ ಸೇರಿದಂತೆ ವಧುವಿನ ತಂದೆ–ತಾಯಿಗಳು, ಬಂಧುಗಳು, ಹಾಗೂ ಸ್ನೇಹಿತರ ಸಮಕ್ಷಮದಲ್ಲಿ ವಿದೇಶಿ ವರನೊಂದಿಗೆ ಕನ್ನಡದ ಹುಡುಗಿ ಕೆ.ಆರ್.ಪೇಟೆಯ ಹುಡುಗಿ ಧೀಕ್ಷಿತಾ ಮದುವೆಯಾಗಿ ದಾಂಪತ್ಯ ಜೀವನಕ್ಕೆ ಕಾಲಿಟ್ಟರು. ಜಾನ್‌ವೈಡಲ್ ತುಂಬಾ ಒಳ್ಳೆಯ ಹುಡುಗ ನಾನೇ ಹುಡುಕಿದ್ದರೂ ನನ್ನ ಮಗಳಿಗೆ ಇಂತಹ ಒಳ್ಳೆಯ ಸಂಬಂಧವನ್ನು ಹುಡುಕಲು ಸಾಧ್ಯವಾಗುತ್ತಿರಲಿಲ್ಲ. ಎಲ್ಲಾ ದೈವೇಚ್ಛೆ ಮಗಳ ಆಸೆಗೆ ಪ್ರೋತ್ಸಾಹ ನೀಡಿ ಮದುವೆ ಮಾಡಿಕೊಟ್ಟಿದ್ದೇವೆ. ಮಗ ಅಳಿಯ ಇಬ್ಬರೂ ಈಶಾ ಫೌಂಡೇಶನ್‌ನಲ್ಲಿ ಯೋಗ ಶಿಕ್ಷಕರಾಗಿ ಕೆಲಸ ಮಾಡುತ್ತಿದ್ದಾರೆ. ಸದ್ಗುರುಗಳ ಆಶೀರ್ವಾದವಿದೆ. ಒಬ್ಬರನ್ನೊಬ್ಬರು ಚೆನ್ನಾಗಿ ಅರ್ಥಮಾಡಿಕೊಂಡು ಸಂತೋಷದಿಂದ ಜೀವನ ನಡೆಸುತ್ತಾರೆ ಎಂಬ ವಿಶ್ವಾಸವಿದೆ ಎಂದು ವಧುವಿನ ತಂದೆಯವರಾದ ರವೀಂದ್ರನಾಥ್ ಹೇಳಿದರು.

ಈಶಾ ಫೌಂಡೇಶನ್‌ಗೆ ಯೋಗ ಕಲಿಯಲು ಬಂದ ಜಾನ್‌ವೈಡಲ್ ಮೇಲೆ ಪ್ರೀತಿಯಾಯಿತು ನಮ್ಮ ಪ್ರೀತಿಗೆ ಎರಡೂ ಕುಟುಂಬಗಳು ಒಪ್ಪಿಗೆ ನೀಡಿದ್ದು ನಮಗೆ ಸಂತೋಷವಾಗಿದೆ. ಜಾನ್ ಕೂಡಾ ಕನ್ನಡ ಕಲಿಯುತ್ತಿದ್ದಾರೆ. ನಮ್ಮ ಭಾಷೆ ಅವರಿಗೆ ಚೆನ್ನಾಗಿ ಅರ್ಥವಾಗತ್ತೆ. ನಾನು ಸ್ಪೇನೀಶ್ ಭಾಷೆ ಕಲಿತಿದ್ದೇನೆ. ನಮ್ಮಿಬ್ಬರಲ್ಲೆ ಸಾಮರಸ್ಯವಿದೆ, ಪ್ರೀತಿಯಿದೆ ಇಬ್ಬರೂ ಚೆನ್ನಾಗಿ ಜೀವನ ನಡೆಸಿ ಸಾಧಿಸಿ ತೋರಿಸುತ್ತೇವೆ ಎಂದು ಧೀಕ್ಷಿತಾ ಹೇಳಿದರು. ವಿದೇಶಿ ಹುಡುಗನೊಂದಿಗೆ ನಡೆದ ಕನ್ನಡದ ಹುಡುಗಿಯ ಮದುವೆಯ ಸಂಭ್ರಮದಲ್ಲಿ ಸಾವಿರಾರು ಜನರು, ಬಂಧುಗಳು, ಸ್ನೇಹಿತರು, ವಿಶ್ವಾಸಿಗಳು ಭಾಗವಹಿಸಿ ಶುಭ ಹಾರೈಸಿದ್ದು ವಿಶೇಷವಾಗಿತ್ತು.

'ಸಿಮಿ' ಕಾನೂನು ಬಾಹಿರ ಸಂಘಟನೆ

ಬೆಂಗಳೂರು: ಸ್ಟೂಡೆಂಟ್ಸ್ ಇಸ್ಲಾಮಿಕ್ ಮೂವ್‌ಮೆಂಟ್ ಆಫ್ ಇಂಡಿಯಾ (ಸಿಮಿ) ಅನ್ನು ಕಲಂ 3(1) ಕಾನೂನು ಬಾಹಿರ ಚಟುವಟಿಕೆಗಳ (ತಡೆ) ಕಾಯ್ದೆ ಅನ್ವಯ ಕಾನೂನು ಬಾಹಿರ ಸಂಘಟನೆಯೆಂದು ಘೋಷಿಸಿ ಕೇಂದ್ರ ಸರ್ಕಾರ ಆದೇಶ ಹೊರಡಿಸಿದೆ. ಕೇಂದ್ರ ಸರ್ಕಾರವು ಉಪ ಕಲಂ (1) ಕಲಂ– 3 ಕಾನೂನು ಬಾಹಿರ ಚಟಿವಟಿಕೆಗಳ (ತಡೆ) ಕಾಯ್ದೆ 1967 (37 ಆಫ್ 1967) (ಇನ್ನೂ ಮುಂದೆ 'ಕಾಯ್ದೆ' ಎಂದು ಕರೆಯಲ್ಪಡುವ) ರ ಅಡಿಯಲ್ಲಿ ತನಗೆ ಪ್ರದತ್ತವಾದ ಅಧಿಕಾರದ ಅನ್ವಯ ಸ್ಟೂಡೆಂಟ್ಸ್ ಇಸ್ಲಾಮಿಕ್ ಮೂವ್‌ಮೆಂಟ್ ಆಫ್ ಇಂಡಿಯಾ (ಸಿಮಿ) ಅನ್ನು ಕಾನೂನು ಬಾಹಿರ ಸಂಘಟನೆಯೆಂದು ಘೋಷಿಸಿ ಅಧಿಸೂಚನೆ ಸಂಖ್ಯೆ: ಎಸ್ಒ 354(ಇ) ದಿನಾಂಕ: 29.01.2024 ರಂದು ಘೋಷಿಸಿದೆ. (ಪ್ರಕಟಿತ ಭಾರತದ ಗೆಜೆಟ್ ಸಂಚಿಕೆ ಭಾಗ–2, ವಿಭಾಗ–3, ಉಪ ವಿಭಾಗ (2) ದಿನಾಂಕ: 29.01.2024). ಕಾಯ್ದೆಯ ಉಪ ಕಲಂ (1) ಕಲಂ 4 ರಲ್ಲಿ ತಿಳಿಸಿರುವಂತೆ ಸ್ಟೂಡೆಂಟ್ಸ್ ಇಸ್ಲಾಮಿಕ್ ಮೂವ್‌ಮೆಂಟ್ ಆಫ್ ಇಂಡಿಯಾ ಅನ್ನು ಕಾನೂನು ಬಾಹಿರ ಸಂಘಟನೆಯೆಂದು ಘೋಷಿಸಲು ಸಾಕಷ್ಟು ಕಾರಣಗಳು ಇವೆಯೇ ಎಂಬ ಬಗ್ಗೆ ನಿರ್ಣಯಿಸಲು ಕಲಂ 5(1) ಕಾಯ್ದೆಯ ಗೆಜೆಟ್ ಪ್ರಕಟಣೆ ಸಂಖ್ಯೆ: ಎಸ್ಒ 722(ಇ) ದಿನಾಂಕ: 16–02–2024 ರಲ್ಲಿ (ಭಾರತ ಸರ್ಕಾರ ಗೆಜೆಟ್, ಎಕ್ಸ್‌ಟ್ರಾರ್ಡಿನರಿ ಭಾಗ–ಖಖ, ಕಲಂ 3(ii) ದೆಹಲಿ ಉಚ್ಚ ನ್ಯಾಯಾಲಯದ ನ್ಯಾಯಾಧೀಶರಾದ ನ್ಯಾಯಮೂರ್ತಿ ಜಸ್ಟೀಸ್ ಪುರುಷೇಂದ್ರ ಕುಮಾರ್ ಕೌರವ್ ರವರನ್ನೊಳಗೊಂಡ ನ್ಯಾಯಾಧೀಕರಣವನ್ನು ರಚಿಸಲಾಗಿದೆ.

ಕಾಯ್ದೆಯ ಕಲಂ 4, ಉಪ ಕಲಂ–2ರ ಅಡಿಯಲ್ಲಿ ಈ ನೋಟೀಸ್‌ನ್ನು ನೀಡಲಾಗಿದ್ದು, ನೀವು ಈ ನೋಟೀಸ್ ಜಾರಿ ಮಾಡಿದ 30 ದಿನದೊಳಗೆ ಸ್ಟೂಡೆಂಟ್ಸ್ ಇಸ್ಲಾಮಿಕ್ ಮೂವ್‌ಮೆಂಟ್ ಆಫ್ ಇಂಡಿಯಾ (ಸಿಮಿ) ಅನ್ನು ಸಾಕಷ್ಟು ಕಾರಣಗಳಿಂದ ಕಾನೂನು ಬಾಹಿರವೆಂದು ತೀರ್ಮಾನಿಸಿ ಘೋಷಿಸಿರುವುದನ್ನು ಏಕೆ ಒಪ್ಪಬಾರದು ಹಾಗೂ ಕಲಂ 4(3)ರ ಅಡಿಯಲ್ಲಿ ಈ ನಿರ್ಣಯವನ್ನು ಒಪ್ಪಿಕೊಂಡು ಏಕೆ ಅಂತಹ ಘೋಷಣೆಯನ್ನು ದೃಢೀಕರಿಸಬಾರದೆಂಬುದಕ್ಕೆ ಕಾರಣಗಳನ್ನು ನೀಡಲು ನಿಮಗೆ ಕರೆ ನೀಡಲಾಗಿದೆ.

ಆಕ್ಷೇಪಣೆಗಳು / ಉತ್ತರ ಏನಾದರೂ ಇದ್ದಲ್ಲಿ ಈ ನೋಟೀಸನ್ನು ಜಾರಿ ಮಾಡಿದ ಒಂದು ವಾರದೊಳಗಾಗಿ ಜಿತೇಂದ್ರ ಪ್ರತಾಪ್ ಸಿಂಗ್, ರಿಜಿಸ್ಟ್ರಾರ್, ಕಾನೂನು ಬಾಹಿರ ಚಟುವಟಿಕೆ (ತಡೆ) ನ್ಯಾಯಾಧೀಕರಣ, ದೆಹಲಿ ಉಚ್ಚ ನ್ಯಾಯಾಲಯ ಕಟ್ಟಡ ನವದೆಹಲಿ, ಅವರ ಕಛೇರಿ ಕೊಠಡಿ ಸಂಖ್ಯೆ: 104, ಮೊದಲನೆಯ ಮಹಡಿ, ಎ ಬ್ಲಾಕ್, ದೆಹಲಿ ಉಚ್ಚ ನ್ಯಾಯಾಲಯ, ಶೇರ್ ಷಾ ರಸ್ತೆ, ನವದೆಹಲಿ–110503 ರಲ್ಲಿ ದಾಖಲಿಸಬಹುದು / ತಲುಪಿಸಬಹುದು. ಆಕ್ಷೇಪಣೆಗಳು / ಉತ್ತರ / ದಾಖಲೆಗಳು ಪ್ರಾಂತೀಯ ಭಾಷೆಯಲ್ಲಿ ಇದ್ದಲ್ಲಿ ಅದರ ಯಥಾವತ್ತಾದ ಆಂಗ್ಲ ಭಾಷಾಂತರದ ಪ್ರತಿಯನ್ನು ಲಗತ್ತಿಸುವುದು. ಖುದ್ದಾಗಿ ಅಥವಾ ನಿಮ್ಮ ಅಧಿಕೃತ ಅನುಮತಿ ಪಡೆದ ವ್ಯಕ್ತಿಯ ಮೂಲಕ ಕೊಠಡಿ ಸಂಖ್ಯೆ: 16, ದೆಹಲಿ ಉಚ್ಚ ನ್ಯಾಯಾಲಯ, ಶೇರ್ ಷಾ ರಸ್ತೆ, ನವದೆಹಲಿ 110503 ರ ದೆಹಲಿಯಲ್ಲಿರುವ ಟ್ರಿಬ್ಯೂನಲ್‌ನ ಮುಂದೆ ದಿನಾಂಕ: 04ನೇ ಮೇ 2024ರಂದು ಮಧ್ಯಾಹ್ನ 4.30 ಗಂಟೆಗೆ ಹಾಜರಾಗುವುದು.

29ನೇ ಫೆಬ್ರವರಿ 2024 ರಂದು ನನ್ನ ಹಸ್ತ ಮತ್ತು ಕಾನೂನು ಬಾಹಿರ ಚಟುವಟಿಕೆ (ತಡೆ) ನ್ಯಾಯಾಧೀಕರಣ, ಉಚ್ಚ ನ್ಯಾಯಾಲಯ, ಶೇರ್ ಶಾ ರಸ್ತೆ, ದೆಹಲಿಯ ಮುದ್ರೆಯೊಡನೆ ಹೊರಡ